# ಅಧ್ಯಯನ – 7 Study - VII

# ಸಭೆಯ ಬಿಡುಗಡೆ ಹಾಗೂ ಉನ್ನತಕ್ಕೇರಿಸಲ್ಪಡುವುದು

# The Deliverance and Exaltation of the Church

**ಸಭೆಯ ಬಿಡುಗಡೆಯು ಸಮೀಪಿಸುತ್ತಿದೆ. ಎಲ್ಲಾ ಮಾನವಜಾತಿಗೆ ಇದು ಬಿಡುಗಡೆಯ ಮುನ್ಸೂಚಕ. ಅದರ ದಿನಾಂಕವನ್ನು ಅಂದಾಜಿಸಲಾಗಿದೆ. ಲೋಕದ ಮೇಲೆ ಬರುವ ಸಂಗತಿಗಳಿಂದ ಸಂತರುಗಳು ಹೇಗೆ ಪಾರಾಗುತ್ತಾರೆ?. ಆಕೆಗೆ ದೇವರು ಹೇಗೆ ಮತ್ತು ಯಾವಾಗ ಸಹಾಯಮಾಡುತ್ತಾನೆ? ಆಕೆಯ ಅಂತಿಮ ಬಿಡುಗಡೆಯ ರೀತಿ ಮತ್ತು ಸಂದರ್ಭಗಳು. ಕ್ರಿಸ್ತನಲ್ಲಿ ನಿದ್ರೆ ಹೋದವರಿಗೆ ಮೊದಲಿಗೆ ಬಿಡುಗಡೆ. ಸಭೆಯ ಜೀವಂತ ಸದಸ್ಯರುಗಳ ಮಾರ್ಪಡುವಿಕೆ. ಅವರು ಮರಣಹೊಂದುತ್ತಾರೋ? ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು.**

**"ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆಯು ಸಮೀಪವಾಗಿದೆ" (ಲೂಕ 21 : 28)**

"ಪ್ರವಾದನೆಯ ದೀವಿಗೆ ಮೂಲಕವಾಗಿ ನಾವು ಸುಗ್ಗಿಯ ಅದ್ಭುತ ಘಟನೆಗಳನ್ನು ಅವುಗಳು ಮಹಾಸಂಕಟದ ಸಮಯದಲ್ಲಿ ಪರಾಕಾಷ್ಠೆಯನ್ನು ತಲುಪುವದನ್ನು ಪತ್ತೆಹಚ್ಚಿದ್ದೇವೆ. ಈ ಘಟನಾ ಅವಧಿಯಲ್ಲಿ ಸಭೆಯ ವಾಗ್ದತ್ತವಾದ ಬಿಡುಗಡೆ ಮತ್ತು ಉನ್ನತಿಗೆ ಏರಿಸಲ್ಪಡುವುದು ಯುಕ್ತವಾಗಿದೆ ಎಂಬುದನ್ನು ನಾವು ನೆನಪಿಸಿಕೊಳ್ಳುವಾಗ, ಸಂತರುಗಳಿಗೆ ಈಗ ಕೇಂದ್ರೀಯ ಆಸಕ್ತಿಯುಳ್ಳ ಸಂಗತಿಗಳು ಅವರ ಬಿಡುಗಡೆಯ ಬಗ್ಗೆ ಅದರ ಸಮಯ, ರೀತಿ ಮತ್ತು ಪರಿಸ್ಥಿತಿಗಳು ಆಗಿವೆ.

ಸುಗ್ಗಿಯ ಘಟನೆಗಳು ಹಾದುಹೋಗುವುದನ್ನು ಕಂಡ ಕೂಡಲೇ ನಮ್ಮ ಭವ್ಯವಾದ ನಿರೀಕ್ಷೆಯು ತ್ವರಿತವಾಗಿ ನಿಜವಾಗುತ್ತಿರುವುದನ್ನು ನಾವು ನಿರೀಕ್ಷಿಸಬಹುದೆಂದು ನಮ್ಮ ಕರ್ತನು ನಮಗೆ ಕಲಿಸಿಕೊಟ್ಟಿದ್ದಾನೆ. ಆದುದರಿಂದ, ಈಗ ನಾವು ಈ ಲಕ್ಷಣಗಳು ಕೂಡಿಬರುವ ನಿದರ್ಶನಗಳನ್ನು ಗುರುತಿಸುವಾಗ, ನಾವು ನಮ್ಮ ತಲೆಗಳನ್ನು ಎತ್ತಿ ಬರಲಿರುವ ಭವ್ಯತೆಯ ಬಗ್ಗೆ ಉಲ್ಲಾಸಗೊಳ್ಳುತ್ತೇವೆ; ಯಾಕೆಂದರೆ ಉದಯವು ಬಂದದೆ, ಸ್ವಲ್ಪ ಅವಧಿಯ ಕತ್ತಲೆಯು ಮಧ್ಯೆ ಪ್ರವೇಶಿಸಬೇಕು. ಈ ಉಲ್ಲಾಸವು ಅದರ ಗುಣಲಕ್ಷಣದಲ್ಲಿ ಸ್ವಾರ್ಥವಾದುದಲ್ಲ; ಯಾಕೆಂದರೆ, ಕ್ರಿಸ್ತನ ಸಭೆಯ ಬಿಡುಗಡೆ ಮತ್ತು ಮೇಲೆತ್ತುವಿಕೆಯು ಎಲ್ಲಾ ಸಂತತಿಗೆ ಮಹಾ ಗುಲಾಮಗಿರಿಯ ಬಲಾತ್ಕಾರ ಮತ್ತು ದಬ್ಬಾಳಿಕೆಗಳು, ರೋಗದ ಛಾಯೆ ಮತ್ತು ನೋವಿನ ಮತ್ತು ಸಾವಿನ ಸೆರೆಮನೆಯಿಂದ ಪಾಪ ಮುಂತಾದವುಗಳು ಬಿಡುಗಡೆಗೆ ಮುನ್ಸೂಚಕವಾಗುತ್ತದೆ. "ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ, ಪ್ರಸವವೇದನೆಪಡುತ್ತಾ ಇರುತ್ತದೆಂದು ನಾವು ಬಲ್ಲೆವು. ಇದು ಮಾತ್ರವಲ್ಲದೆ, ಪ್ರಥಮ ಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿರುವ ನಾವಾದರೋ, ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ರೋಮಾ. 8: 22–23); ಯಾಕೆಂದರೆ, ಯೆಹೋವ ದೇವರ ವ್ಯವಸ್ಥೆಯ ಪ್ರಕಾರ, ಮಹಾ ಆಡಳಿತಗಾರನಾದ ಕ್ರಿಸ್ತನು ಶಿರಸ್ಸಾಗಿ ಮತ್ತು ದೇಹವು ಸಂಪೂರ್ಣವಾಗಿ, ಪೂರ್ಣ ಅಧಿಕಾರಕ್ಕೆ ಬರುವವರೆಗೆ ನೂತನ ಕ್ರಮವನ್ನು ಸ್ಥಾಪಿಸಲಾಗುವುದಿಲ್ಲ.

ಶಾರೀರಿಕ ಇಸ್ರಾಯೇಲ್ಯರ ಬಿಡುಗಡೆಯು ನಾವು ನೊಡುವಂತೆ 1914ರ ನಂತರದಲ್ಲಿ ಆಗುವಂತೆ ನಿಶ್ಚಯವಾಗಿರುವುದರಿಂದ, ಸಂತರುಗಳ ಬಿಡುಗಡೆಯು 1914ರ ನಂತರದ ಯಾವ ಸಮಯದಲ್ಲಿಯೂ ಆಗುತ್ತದೆ ಎಂಬುದು ಸ್ಪಷ್ಟ ಮತ್ತು ಕೋಪಿಸಿಕೊಂಡ ಜನಾಂಗಗಳಿಗೆ ನಂತರದಲ್ಲಿ ಸುಮ್ಮನಿರುವಂತೆ ಅಧಿಕಾರಯುಕ್ತವಾಗಿ ಆದೇಶಿಸಲಾಗುವುದು ಮತ್ತು ಯೆಹೋವನಿಂದ ಅಭಿಷೇಕ ಹೊಂದಿದವರ ಶಕ್ತಿಯನ್ನು ಗ್ರಹಿಸಿಕೊಳ್ಳುವಂತೆ ಮಾಡಲಾಗುವುದು. 1914ರ ನಂತರ ಕ್ರಿಸ್ತನ ದೇಹದ ಕಡೆಯ ಸದಸ್ಯರುಗಳಾದವರು ಮಹಿಮೆ ಹೊಂದಿಕೊಳ್ಳುವರೆಂದು ನಮಗೆ ನೇರವಾಗಿ ತಿಳಿಸಲಾಗಿಲ್ಲ. ಆದರೆ ಶರೀರಧಾರಿಯಾಗಿ ಅವರ ಕಾರ್ಯವು ಮಾಡಿ ಮುಗಿಸುವವರೆಗೆ ಖಂಡಿತವಾಗಿಯೂ ಅಲ್ಲ; ಅಥವಾ ನಾವು ಅವರುಗಳು ಆ ಕಾರ್ಯವು ನೆರವೇರಿದ ಮೇಲೂ ಬಹಳ ಕಾಲ ಉಳುಕೊಳ್ಳುತ್ತಾರೆಂದು ಊಹಿಸಲಾಗದು. ಈ ಎರಡು ಆಲೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ನಾವು ಬಿಡುಗಡೆಯ ಸಮಯವನ್ನು ಅಂದಾಜಿಸಬಹುದು.

ದೇಹದ ಯಾವ ಜೀವಂತ ಸದಸ್ಯರಾದರೂ ಬಿರುಗಾಳಿಯು ಸೇರಿಬರುವುದನ್ನು ನೋಡಬಹುದು ಮತ್ತು ಅದು ತರುವ ಕೆಲವೊಂದು ತೊಂದರೆಗಳಲ್ಲಿ

ಪಾಲುತೆಗೆದುಕೊಳ್ಳಬಹುದೆಂಬ ಸೂಚನೆಗಳು ಇರುವಾಗ, ಅವುಗಳಲ್ಲಿ ಯಾರೂ ಅದರ ಮೂಲಕ ಸಮಗ್ರವಾಗಿ ಹಾದುಹೋಗುವುದಿಲ್ಲ, ಅಥವಾ ಅದರೊಳಗೆ ಹೋಗುವುದಿಲ್ಲ ಎಂಬುದಕ್ಕೆ ಸಾಕ್ಷ್ಯವೂ ಇದೆ. "ಇವೆಲ್ಲವುಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲೂ ದೇವರಿಗೆ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರಿ" (ಲೂಕ 21: 36) ಎಂಬ ಒಡೆಯನ ಮಾತುಗಳು ಇದನ್ನು ಸೂಚಿಸುವಂತೆ ಕಾಣುತ್ತವೆ. ಆದಾಗ್ಯೂ, ನಾವು ಈ ಸಂಕಟ ಕಾಲದ ಪ್ರಾರಂಭವನ್ನು ಈಗಾಗಲೇ ಹಾದು ಹೋಗುತ್ತಿದ್ದೇವೆಂಬುದು ನಮಗೆಲ್ಲಾ ತಿಳಿದಿದೆ. ಇದು ಹೆಸರು ಮಾತ್ರದ ಸಭೆಗೆ ಬರುವ ಸಂಕಟಗಳು, ಅವುಗಳನ್ನು ಪರೀಕ್ಷೆ ಮಾಡುವ ಘಟನೆಗಳು ಮತ್ತು ನಾವು ಅವುಗಳನ್ನು ತಪ್ಪಿಸಿಕೊಳ್ಳುತ್ತಿರುವಾಗ, ಅನೇಕರು ಎಲ್ಲಾ ಕಡೆಗಳಲ್ಲಿ ತಪ್ಪು ಬೋಧನೆ ಮತ್ತು ಅಪನಂಬಿಕೆಯೊಳಗೆ ಬೀಳುತ್ತಾರೆ. ನಾವು ಅದರಿಂದ ತಪ್ಪಿಸಿಕೊಳ್ಳುವುದು ಆ ಸಂಕಷ್ಟದ ಸ್ಥಳದಿಂದ ನಮ್ಮನ್ನು ಹೊರ ತೆಗೆಯುವವರಿಂದ ಅಲ್ಲ, ಆದರೆ ನಮ್ಮ ಖೇಡ್ಯವೂ, ಗುರಾಣಿಯೂ ಆದ ದೇವರ ಮಾತುಗಳಿಂದ ಬೆಂಬಲ ಮತ್ತು ಬಲ ಹೊಂದಿಕೊಂಡು, ಅದರ ಮಧ್ಯದಲ್ಲಿರಿಸಲ್ಪಟ್ಟಿದ್ದೇವೆ (ಕೀರ್ತನೆ 91:4). ಅದೇ ರೀತಿಯಲ್ಲಿ ದೇಹದ ಕೆಲವು ಸದಸ್ಯರುಗಳು ಸಂಕಟದ ಸಮಯದ ಅಂತ್ಯದವರೆಗೂ ಉಳುಕೊಳ್ಳುತ್ತಾರೆ ಮತ್ತು ಅದರ ಮೂಲಕ ಹಾದುಹೋಗುತ್ತಾರೆ ಎಂಬುದನ್ನು ಮತ್ತು ಅವರು ಆ ರೀತಿಯಲ್ಲಿ ಬರುವ ಎಲ್ಲಾ ಸಂಕಟಗಳಿಂದಲೂ ತಪ್ಪಿಸಿಕೊಳುತ್ತಾರೆ ಎಂಬುದನ್ನು ಒಪ್ಪಿಕೊಳ್ಳುವಾಗ, ಸಂಕಟದ ಕಠೋರ ಲಕ್ಷಣಗಳು ಬರುವುದರೊಳಗೆ, ದೇಹವು ಸಂಪೂರ್ಣಗೊಂಡ ಮೇಲೆ ಮತ್ತು ಬಾಗಿಲು ಮುಚ್ಚಿದ ಮೇಲೆಯೂ ದೇಹದ ಎಲ್ಲಾ ಸದಸ್ಯರುಗಳೂ ಸಂಪೂರ್ಣವಾಗಿ ಬಿಡುಗಡೆ ಹೊಂದಿಕೊಳ್ಳುತ್ತಾರೆ, ಮಹಿಮಾಸ್ಥಿತಿಗೆ ಎತ್ತಲ್ಪಡುತ್ತಾರೆ ಎಂಬುದಾಗಿ ನಾವು ತಿಳುಕೊಳ್ಳಬೇಕೆಂಬುದು ಸ್ಪಷ್ಟವಾಗಿದೆ.

ಬಿರುಗಾಳಿಯು ಕಳೆದ ಹಲವಾರು ವರ್ಷಗಳಿಂದ ಒಟ್ಟುಗೂಡುತ್ತಿದೆ ಎಂಬುದನ್ನು ನಾವು ನೋಡಿದ್ದೇವೆ. ಬಲಶಾಲಿಗಳಾದ ಸಮೂಹಗಳು ಜಮಾಯಿಸಿಕೊಂಡು ಯುದ್ಧಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ ಮತ್ತು ಪ್ರತಿಯೊಂದು ಯಶಸ್ವಿ ವರ್ಷದಲ್ಲಿಯೂ ಮುಂತಿಳಿಸಿರುವ ಸಂದಿಗ್ಧ ಸ್ಥಿತಿಯತ್ತ ವೇಗವಾಗಿ ಪ್ರಗತಿಯು ದಾಪುಗಾಲು ಹಾಕುತ್ತಿದೆಯೆಂಬುದು ಕಾಣುತ್ತಿದೆ; ಆದಾಗ್ಯೂ, ಆ ಅಸಮಾನಾಂತರ ವಿಪತ್ತು ಎಲ್ಲಾ ಕಾನೂನು ಕ್ರಮಗಳನ್ನೂ ಅರಾಜಕತೆ ಮತ್ತು ಗೊಂದಲದ ಮಡುವಿಗೆ ಅಪ್ಪಳಿಸುವುದೆಂದು ನಮಗೆ ತಿಳಿದಿದ್ದರೂ ನಾವು ಹೆದರುವುದಿಲ್ಲ. ಯಾಕೆಂದರೆ "ದೇವರು ನಮ್ಮ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮ್ಮ ವಿಶೇಷ ಸಹಾಯಕನು. ಆದುದರಿಂದ ಭೂಮಿಯು (ಪ್ರಸ್ತುತ ಸಮಾಜದ ವ್ಯವಸ್ಥೆ) ಮಾರ್ಪಟ್ಟರೂ (ನೆಲೆಗೊಳ್ಳದೆ ಮತ್ತು ಸಂಘಟಿತಗೊಳ್ಳದೇ ಹೋದರೂ) ಬೆಟ್ಟಗಳು (ರಾಜ್ಯಗಳು) ಸಮುದ್ರದಲ್ಲಿ (ಯಾವುದೇ ಕಾನೂನುಗಳಿಲ್ಲದ ಮತ್ತು ನಿಯಂತ್ರಿಸಲಾಗದ ಜನರು) ಮುಣುಗಿ ಹೋದರೂ ನಮಗೇನೂ ಭಯವಿಲ್ಲ. ಸಮುದ್ರವು ಘೋಷಿಸುತ್ತಾ ನೊರೆಯನ್ನು (ವಾದವಿವಾದಗಳನ್ನು ಎತ್ತಿ ಹಿಡಿಯುವ ಪಕ್ಷಗಳು) ಕಾರಿದರೇನು? ಅದರ ಅಲ್ಲೋಲ ಕಲ್ಲೋಲಗಳಿಂದ ಪರ್ವತಗಳು (ರಾಜ್ಯಗಳು) ಚಲಿಸಿದರೇನು? (ಭಯ ಮತ್ತು ಅಸುರಕ್ಷತೆಯ ನಿಮಿತ್ತ ನಡಗಿದರೇನು?)" – ಕೀರ್ತನೆ 46:1–3.

"ಒಂದು ನದಿ ಅದೆ (ದೇವರ ವಾಕ್ಯ, ಸತ್ಯ ಮತ್ತು ಕೃಪೆಯ ಕಾರಂಜಿ ಅಥವಾ ಬುಗ್ಗೆ); ಅದರ ಕಾಲುವೆಗಳು ಪರಾತ್ಪರನ ಪರಿಶುದ್ಧ ನಿವಾಸವಾಗಿರುವ ದೇವನಗರವನ್ನು (ದೇವ ರಾಜ್ಯ, ಸಭೆ – ಅದರ ಪ್ರಸ್ತುತ ಭ್ರೂಣಾವಸ್ಥೆಯಲ್ಲಿಯೂ, ಅಧಿಕಾರಕ್ಕೆ ಮತ್ತು ಮಹಿಮೆಗೆ ಉನ್ನತಿಹೊಂದಿಕೊಳ್ಳುವ ಮುಂಚೆಯೂ) ಸಂತೋಷ ಪಡಿಸುತ್ತವೆ. ದೇವರು ಇದರಲ್ಲಿದ್ದಾನೆ (ಪವಿತ್ರ ಸ್ಥಳ, ದೇವಾಲಯ, ಮಹೋನ್ನತನು ವಾಸಮಾಡಲು ಇಷ್ಟಪಡುವ ಸ್ಥಳ); ಇದಕ್ಕೆ ಚಲನವೇ ಇಲ್ಲ. ಉದಯ ಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು" – ಕೀರ್ತನೆ 46:4–5.

ಪ್ರಸ್ತುತ ಸಮಯದಲ್ಲಿ ನಮ್ಮ ಪ್ರಸ್ತುತ ಅಗತ್ಯತೆಯಲ್ಲೆಲ್ಲಾ ನಮಗೆ ಇದರ ವಾಗ್ದತ್ತ ಸಹಾಯವು ಗ್ರಹಿಕೆಯಾಗುತ್ತಿದೆ. ನಮ್ಮ ಪರಲೋಕದ ತಂದೆಯ ಭರವಸೆಗೆ ತಕ್ಕೊಂಡು, ಆತನ ಯೋಜನೆಗಳ ಬಗ್ಗೆ ಪರಿಚಯಪಡಿಸಿ ಮತ್ತು ಆತನ ಕೃಪೆಯನ್ನು, ಸಂರಕ್ಷಿಸುವ ದಯೆಯನ್ನು ದೃಢಪಡಿಸಿ ಆತನೊಂದಿಗೆ ಜೊತೆ ಸೇವಕರನ್ನಾಗಿ ಸಹ ಮಾಡುತ್ತದೆ. ಈ ಸಹಾಯವನ್ನು ನಾವು ನಮ್ಮ ಜೀವನ ಮಾರ್ಗದ ಕಡೆಯವರೆಗೂ ಸ್ಪಷ್ಟವಾಗಿ ಗ್ರಹಿಸುತ್ತೇವೆ. ನಂತರದಲ್ಲಿ ನಮಗೆ ಇನ್ನೂ ಹೆಚ್ಚಾದ ಸಹಾಯ ದೊರೆತು ನಾವು ಕರೆಯಲ್ಪಟ್ಟ, ಮತ್ತು ಮೇಲ್ಪಟ್ಟದ ವಲಯಕ್ಕೆ ಬದಲಾಗುತ್ತೇವೆ ಮತ್ತು ಅದರ ಕಡೆಗೆ ನಾವು ಪರಿಶ್ರಮದಿಂದ ನಮ್ಮ ಮಾರ್ಗದ ಕಡೆಗೆ ಪ್ರೇರೇಪಿಸುತ್ತೇವೆ.

ಕ್ರಿಸ್ತನ ದೇಹದ ಕಡೆಯ ಜೀವಂತ ಸದಸ್ಯರುಗಳ ಈ "ಮಾರ್ಪಡುವಿಕೆಯು" ಅವರು ಈ ದೇಹದಲ್ಲಿರುವಾಗ ಮಾಡಲು ನೀಡಿದ ಕಾರ್ಯಗಳನ್ನು ನೆರವೇರಿಸದ ಹೊರತು ದೊರೆಯಲಾಗದು, ಹಿಂದಿನ ಅಧ್ಯಾಯದಲ್ಲಿ ನಾವು ಕಂಡುಕೊಂಡಂತೆ, ಇದುವರೆಗೆ ನಮ್ಮ ಕೆಲಸವನ್ನು ಮೊಟಕುಗೊಳಿಸಲಾಗುವುದು. ಮೊದಲಿಗೆ ಕ್ರಮೇಣವಾಗಿ, ನಂತರ ಪೂರ್ತಿಯಾಗಿ. "ಕತ್ತಲು ಬರುವಾಗ ಯಾರೂ ಕೆಲಸವಮಾಡಲಾರರು" (ಯೋಹಾನ 9:4) ಮತ್ತು ಆ ರಾತ್ರಿಯ ಮಬ್ಬು ಸಹಸ್ರಮಾನದ ಸೂರ್ಯೋದಯದಲ್ಲಿ ಮಾತ್ರವೇ ಚದುರಿಸಲ್ಪಡುವುದು. ನಮ್ಮ ಕೆಲಸವನ್ನು ಮಾಡಿ ಮುಗಿಸಿದಾದ ನಂತರ, ಮತ್ತು ಆ ರಾತ್ರಿಯು ನಮ್ಮ ಸುತ್ತಲೂ ಮುತ್ತುವುದು, ನಾವು ಬಿರುಗಾಳಿಯ ಮೋಡವು ಹೆಚ್ಚು ಕಪ್ಪಾಗುವುದನ್ನು ನೋಡಲು ಅಪೇಕ್ಷಿಸಿವುದು ಮಾತ್ರವಲ್ಲ, ಮೇಲೇಳುವ 'ಗಾಳಿ'ಯ ಧ್ವನಿಯನ್ನು ಆಲಿಸುತ್ತೇವೆ ಮತ್ತು ಅನುಭವಿಸುತ್ತೇವೆ – ಆ ಗಾಳಿಯು ಒರಟಾದ ಮಾನವ ಭಾವೋದ್ರೇಕದ ಚಂಡಮಾರುತವಾಗಿ, ಸಂಕಟದ ಸುಂಟರಗಾಳಿಯಾಗಿ ತುತ್ತತುದಿಗೇರುತ್ತದೆ. ನಂತರದಲ್ಲಿ ನಮಗೆ ನೇಮಿಸಲ್ಪಟ್ಟ ಕೆಲಸವನ್ನು ಮುಗಿಸಿದ ನಾವು ನಮ್ಮ ಮಾರ್ಪಡುವಿಕೆ ಬರುವವರೆಗೆ ತಾಳ್ಮೆಯಿಂದ ಕಾಯ್ದುಕೊಂಡು ನಿಂತುಕೊಳ್ಳಬೇಕಾಗುತ್ತದೆ – ಎಫೆಸ 6 : 13.

ತನ್ನ ಭಕ್ತರು ಆತನ ಕೆಲಸದ ವಿಷಯವಾಗಿ ಹೇರಲ್ಪಟ್ಟ ಈ ಆಲಸಿಕೆಯಲ್ಲಿ ಎಷ್ಟರವರೆಗೆ ನಿಂತುಕೊಳ್ಳುವಂತೆ ಬಿಡಲು ದೇವರು ಇಷ್ಟಪಡುತ್ತಾನೆಂಬುದು ತಿಳಿಯುತ್ತಿಲ್ಲ. ಬಹುಷಃ ನಂಬಿಕೆ ಮತ್ತು ತಾಳ್ಮೆಯು ತಮ್ಮ ಸಮರ್ಪಕವಾದ ಕಾರ್ಯವನ್ನು ಪಡಕೊಳ್ಳುವವರೆಗೆ ಇರಬಹುದು. ಇಲ್ಲಿ ಈ ಸದ್ಗುಣಗಳು ಬಹಳ ಪೂರ್ಣವಾಗಿ ಅಭಿವೃದ್ಧಿಹೊಂದುತ್ತವೆ, ಪರೀಕ್ಷೆಗೊಳಪಡುತ್ತವೆ ಮತ್ತು ಪ್ರಕಟಗೊಳ್ಳುತ್ತವೆ, ಈ ತಾಳ್ಮೆಯ ಪರೀಕ್ಷೆಯು ಸಭೆಯ ಅಂತಿಮ ಶೋಧನೆಯಾಗಿದೆ. ನಂತರದಲ್ಲಿ ದೇವರು "ಉದಯಕಾಲದಲ್ಲಿ ಇದರ (ಆಕೆಯ) ಸಹಾಯಕ್ಕೆ ಬರುವನು" (ಕೀರ್ತನೆ 46:5). ಈ ಲೋಕದ ಮೇಲೆ ಉದಯಿಸುವ ನೀತಿಸೂರ್ಯನಾದ ಕರ್ತನೊಂದಿಗೆ ಉದಯಿಸುವ ಬೆಳಗ್ಗೆ ಅಲ್ಲ, ಆದರೆ, ಆಕೆಯ ಬೆಳಗಿನ ಉದಯದಲ್ಲಿ ಆಕೆಯು ತನ್ನ ಕರ್ತನ ಸಾರೂಪ್ಯದಲ್ಲಿ ಆತನಂತೆ ಆಗಬೇಕು. ಆಕೆಯ ಉದಯವು ಸಹಸ್ರಮಾನದ ಉದಯದ ಮುಂಚಿತವಾಗಿ ಬರುವಂತಹದ್ದಾಗಿದೆ.

ಈ ಅಂಧಕಾರದ ರಾತ್ರಿಯು ಈಗಾಗಲೇ ಸಮೀಪಿಸುತ್ತಿದೆ ಎಂಬುದು ಪರಿಶುದ್ಧ ಗ್ರಂಥಗಳಿಂದ ಮಾತ್ರವಲ್ಲ ಈ ಕಾಲದ ಎಲ್ಲಾ ಸೂಚನೆಗಳಿಂದ ನಮಗೆ ವೇದ್ಯವಾಗಿದೆ; ಮತ್ತು ಸಭೆಯ ವಿಧಿಯು ಹಾಗಾದರೆ, ಆಕೆಯ ಮಾನವ ಜೀವನ ಯಾತ್ರೆಗೆ ಸಂಬಂಧಿಸಿದಂತೆ ಈಗಾಗಲೇ ಹೇಳಿರುವಂತೆ (Vol. II, pages 260 – 263) ಎಲೀಯನ ಮತ್ತು ಸ್ನಾನಿಕನಾದ ಯೋಹಾನನ ಜೀವಿತಗಳ ಅಂತ್ಯದ ಪುಟಗಳಲ್ಲಿ ಮುಖ್ಯ ಅಂಶಗಳು ಇರುವಂತೆ ತೋರುತ್ತದೆ. ಒಬ್ಬನು ಅಗ್ನಿಮಯವಾದ ರಥದಲ್ಲಿ ಕುಳಿತು ಸುಂಟರಗಾಳಿಯಲ್ಲಿ ಮಾಯವಾದುದು ಮತ್ತು ಮತ್ತೊಬ್ಬನ ಶಿರಚ್ಛೇಧನ ಇವುಗಳು ಬಹುಶಃ ಕ್ರಿಸ್ತನ ದೇಹದ ಕಡೆಯ ಸದಸ್ಯರಿಗೆ ಉಂಟಾಗುವ ಹಿಂಸೆಯನ್ನು ಸೂಚಿಸುತ್ತದೆ. ಹೀಗಿದ್ದರೂ ಚಿಯೋನ್ ಹೆದರಬೇಕಾಗಿಲ್ಲ; ಯಾಕೆಂದರೆ ದೇವರು ಆಕೆಯ ಮಧ್ಯದಲ್ಲಿದ್ದಾನೆ ಮತ್ತು ಆಕೆಗೆ ಸಹಾಯಮಾಡುತ್ತಾನೆ. ಆಕೆಯ ಪ್ರತಿಷ್ಟೆಯು ಮರಣಪರ್ಯಂತ, ಮತ್ತು ಆಕೆಯ ವಿಶೇಷ ಹಕ್ಕು ತನ್ನ ನಂಬಿಗಸ್ತಿಕೆಯನ್ನು ಸಾಬೀತುಪಡಿಸುವುದಾಗಿದೆ" – "ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ, ಧಣಿಗಿಂತ ಆಳು ದೊಡ್ಡವನಲ್ಲ. ಗುರುವಿನಂತೆ ಆಗುವುದು ಶಿಷ್ಯನಿಗೆ ಸಾಕು, ಧಣಿಯಂತೆ ಆಗುವುದು ಆಳಿಗೆ ಸಾಕು." – ಮತ್ತಾಯ 10:24,25.

ಬಹುಶಃ ಇದು 'ಮಹಾ ಬಾಬೇಲ್' 'ಕ್ರೈಸ್ತ ಪ್ರಪಂಚ'ದ ಸ್ವಯಂ ಸಂರಕ್ಷಣೆಯ ಪ್ರಯತ್ನವಾಗಿದೆ ಆಕೆಯ ಶಕ್ತಿಯು ರಾಜಕೀಯದಲ್ಲಿ, ಪುರೋಹಿತ ವರ್ಗದ ಐಹಿಕ ಧೋರಣೆಯಲ್ಲಿ ಮತ್ತು ಮೂಢನಂಬಿಕೆಯಲ್ಲಿ ಕ್ಷೀಣಿಸುತ್ತಿರುವುದನ್ನು ಕಾಣುವಾಗ, ಸತ್ಯವನ್ನು ಪ್ರಚುರಪಡಿಸುವ ಕಾರ್ಯಗಳು ಆಕೆಯ ಪದ್ಧತಿಯನ್ನು ಅಪಾಯಕಾರಿಯಾಗಿ ಸ್ಥಗಿತಗೊಳಿಸುವುದು. ಬಹುಶಃ ಈ ಸಂದಿಗ್ಧ ಸಮಯದಲ್ಲಿ ಎಲೀಯನ ವರ್ಗದವರು ಸತ್ಯವನ್ನು ಪ್ರಕಟಿಸಲು ಕಡೆಯವರೆಗೆ ಪಟ್ಟುಹಿಡಿಯುತ್ತಾರೆ ಮತ್ತು ಹಿಂಸೆಯನ್ನನುಭವಿಸುತ್ತಾರೆ, ಮಹಿಮೆಗೆ ಹಾದು ಹೋಗುತ್ತಾರೆ ಮತ್ತು ಸಂಕಟ ಸಮಯದಲ್ಲಿ ಬರಲಿರುವ ಅತ್ಯಂತ ಉಗ್ರವಾದ ಲಕ್ಷಣಗಳಿಂದ ತಪ್ಪಿಸಿಕೊಳ್ಳುತ್ತಾರೆ, ವ್ಯವಹಾರಗಳ ಬಿಕ್ಕಟ್ಟಿನ ಸಮಯದಲ್ಲಿ, ಜನರು ಕ್ರೈಸ್ತ ಪ್ರಪಂಚದ ಅಲುಗಾಡುವಿಕೆಯನ್ನು ಸಂರಕ್ಷಿಸಲು ಹತಾಶ ಕ್ರಮಗಳನ್ನು ಆಶ್ರಯಿಸಬೇಕೆಂದು ಭಾವಿಸುತ್ತಾರೆ.

ಕ್ರಿಸ್ತನ ದೇಹದ ಕಡೆಯ ಸದಸ್ಯರುಗಳ ವಿಮೋಚನೆಯ ಅಥವಾ "ಬದಲಾವಣೆ"ಯ ಸರಿಯಾದ ಸಮಯವನ್ನು ಹೇಳಿಲ್ಲವಾದರೂ, ಅಂದಾಜು ಸಮಯವು "ಬಾಗಿಲು ಮುಚ್ಚಿದ ಸ್ವಲ್ಪ

ಸಮಯದ ನಂತರ" (ಮತ್ತಾಯ 25:10) ಎಂದು ಸ್ಪಷ್ಟವಾಗಿ ಪ್ರಕಟವಾಗಿದೆ; ಬಾಬೇಲ್ ಈಗ ಸತ್ಯದ ನಂತರ ಬಾಬಿಲೋನ್ ಈಗ ತನ್ನ ಶತ್ರು ಎಂದು ಪರಿಗಣಿಸಲು ಪ್ರಾರಂಭಿಸುತ್ತದೆ. ಆಕೆಯ ನಾಶವನ್ನು ಸಾಧಿಸಲು ಲೆಕ್ಕ ಹಾಕಿದಂತೆ ಆ ವಿಷಯವು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯಲ್ಪಟ್ಟು ವ್ಯಾಪಕವಾಗಿ ಪ್ರಸಾರವಾಗಿರುತ್ತದೆ. ಸತ್ಯವೆಂಬ "ಕಲ್ಮಳೆ"ಯು ಸುಳ್ಳುಗಳ ಆಶ್ರಯವನ್ನು ಗಣನೀಯ ಪ್ರಮಾಣದಲ್ಲಿ ಕೊಚ್ಚಿಕೊಂಡು ಹೋಗಿರಲು, ಮತ್ತು ಈಗ ಸತ್ಯದ ಮೇಲೆ ಹೊಗೆಯಾಡಿಸುವ ಮತ್ತು ಭೀತಿಗೊಳಿಸುವ ದ್ವೇಷವನ್ನು ವಿರೋಧಿಗಳು ಹಿಂಸಾತ್ಮಕವಾಗಿ ಪ್ರಚೋದಿಸಿದ ನಂತರ ಮತ್ತು ಸಂತರು ತೊಡಗಿಸಿಕೊಂಡಿರುವ ಮುಂದಿನ ಪ್ರಗತಿಯನ್ನು ತಡೆಯುವುದು ಪರಿಣಾಮಕಾರಿಯಾಗಿ ಸಾಮಾನ್ಯವಾಗಿದೆ. ಆಯ್ದುಕೊಂಡವರೆಲ್ಲರೂ "ಮುದ್ರೆ ಹಾಕಲ್ಪಟ್ಟ" ಕೂಡಲೇ ದೇವರು ಇದನ್ನು ಅನುಮತಿಸುತ್ತಾನೆ. ಆದರೆ ಸಂತರುಗಳು ದೇಹಧಾರಿ ಗಳಾಗಿರುವಾಗ ಯಾವುದೇ ತೊಂದರೆ ಅಥವಾ ಅನಾಹುತ ಅವರಿಗಾಗಿ ಕಾದುಕೊಂಡಿರುವುದು ಕಂಡುಬಂದರೆ ಮತ್ತು ಅವರ ಆಹಾರ ಮತ್ತು ಪಾನೀಯವಾಗಿರುವ, ಅವರ ಯಾವುದೇ ಕೆಲಸಕ್ಕೆ ತಡೆಯೊಡ್ಡಿದರೆ, ಹಾಗೆ ಮಾಡುವುದು ನಮ್ಮ ಪರಲೋಕದ ತಂದೆಯ ಗಮನಕ್ಕೆ ಬಾರದೆ ಇರುವುದಿಲ್ಲ, ಆತನ ಅನುಮತಿ ಇಲ್ಲದೆ ಸಂಭವಿಸುವುದಿಲ್ಲವೆಂಬುದನ್ನು ನಾವು ನೆನಪು ಮಾಡಿಕೊಂಡು ಸಮಾಧಾನ ದಿಂದಿರೋಣ, ನಂಬಿಕೆಯ ಮತ್ತು ತಾಳ್ಮೆಯ ಪ್ರತಿಯೊಂದು ಪರೀಕ್ಷೆಯಲ್ಲಿಯೂ ದೇವರಲ್ಲಿ ನೆಲೆಯಾಗಿರುವವರಿಗೆ, ಮತ್ತು ಆತನಲ್ಲಿ ದೇವರ ವಾಕ್ಯವು ನೆಲೆಗೊಂಡಿರುವವರಿಗೆ ಆತನ ಕೃಪೆಯೇ ಸಾಕು. ನಾವು ಪರದೆಯ ಆಚೆಕಡೆಗೆ ನೋಡೋಣ ಮತ್ತು ನಂಬಿಕೆ ಕಣ್ಣುಗಳನ್ನು ಉನ್ನತ ಕರೆಯ ಬಹುಮಾನದ ಮೇಲೆ ನೆಟ್ಟಿರೋಣ. ಇದನ್ನು ದೇವರು ತನ್ನಲ್ಲಿ ಆತನನ್ನು ಪ್ರೀತಿಸುವವರಿಗಾಗಿ, ಕರೆಯಲ್ಪಟ್ಟವರಿಗಾಗಿ, ನಂಬಿಗಸ್ತರಿಗಾಗಿ ಮತ್ತು ತನ್ನ ಉದ್ದೇಶಕ್ಕನುಸಾರವಾಗಿ ಅಯ್ಕೆಗೊಂಡವರಿಗಾಗಿ ಕಾದಿರಿಸಿಕೊಂಡಿದ್ದಾನೆ – ಪ್ರಕಟನೆ 17:14; ರೋಮಾ. 8:28.

ಸಭೆಯ ಸಂಪೂರ್ಣ ವಿಮೋಚನೆಯ ಸಮಯ ಮತ್ತು ಸಂದರ್ಭಗಳನ್ನು ನಾವು ಹೀಗೆ ಸಮಂಜಸವಾಗಿ ಮತ್ತು ವೇದದೊಡನೆ ಅಂದಾಜು ಮಾಡಿದರೂ, ಆಕೆಯ ಮಹಿಮೆ ಹೊಂದುವ ವಿಧಾನವು ಆಸಕ್ತಿ ಹೆಚ್ಚಿಸುವ ಪ್ರಶ್ನೆಯಾಗಿದೆ ಮತ್ತು ನಾವು ಪುನಃ ದೈವಿಕ ಸಂದೇಶವನ್ನು ಶೋಧಿಸಬೇಕಾಗುತ್ತದೆ.

ಮೊದಲಿಗೆ ಪೌಲನು "ನಾವೆಲ್ಲರೂ ಮಾರ್ಪಡಬೇಕು (ಜೀವಿಸುವವರು ಸತ್ತ ಸಂತರಿಗಿಂತ ಕಡಿಮೆಯಲ್ಲ), ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳಬೇಕು, ಮರಣಾ ಧೀನವಾದ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದು ಅವಶ್ಯ". ಯಾಕೆಂದರೆ "ರಕ್ತವೂ ಮಾಂಸವೂ ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು, ಲಯವಾಗುವ ವಸ್ತುವು ನಿರ್ಲಯಪದವಿಗೆ ಬಾಧ್ಯವಾಗುವುದಿಲ್ಲ" (1 ಕೊರಿ. 15:50, 52–54). ಮರಣಾಧೀನತೆಯಿಂದ ಅಮರತ್ವಕ್ಕೆ ಆಗುವ ಬದಲಾವಣೆಯನ್ನು ಆತನು ನಮಗೆ ಭರವಸ ಪಡಿಸುವನು. ಇದು ಕ್ರಮೇಣ ಬೆಳವಣಿಗೆಯಿಂದ ನೆರವೇರುವುದಿಲ್ಲ. ಆದರೆ ಅದು ತತ್‌ಕ್ಷಣದಲ್ಲಿ ನೆರವೇರುವಂಥಾದ್ದು. "ಕ್ಷಣ ಮಾತ್ರದಲ್ಲಿ, ಕಣ್ಣುರೆಪ್ಪೆ ಬಡಿಯುವಷ್ಟರಲ್ಲಿ, ಕಡೆಯ ತುತೂರಿಯು ಮೊಳಗುವಾಗ". ಅದು ಆಗಲೇ ಮೊಳಗುತ್ತಿದೆ (See Vol. II, Chapter V).

ಮೇಲಾಗಿ, ಕ್ರಮಬದ್ಧತೆಯನ್ನು ಅನುಸರಿಸಲಾಗು ವುದು; ಕೆಲವರು ಮೊದಲಿಗೆ ಮಹಿಮೆಹೊಂದಿ ಕೊಳ್ಳುತ್ತಾರೆ ಅಥವಾ ಮೊದಲಿಗೆ ಮಾರ್ಪಡುತ್ತಾರೆ. ಮತ್ತೆ ಕೆಲವರು ನಂತರದಲ್ಲಿ. "ಯೆಹೋವನು ತನ್ನ ಭಕ್ತರ ಮರಣವನ್ನು ಅಲ್ಪವೆಂದು ಎಣಿಸುವುದಿಲ್ಲ" (ಕೀರ್ತನೆ 116:15); ಅನೇಕರು ಬಹಳ ದೀರ್ಘಕಾಲ ನಿದ್ರೆಹೋಗಿದ್ದರೂ, ಯಾರನ್ನೂ ಮರೆತಿರುವುದಿಲ್ಲ. ಅವರ ಹೆಸರುಗಳು ಚೊಚ್ಚಲು ಮಕ್ಕಳ ಸಭೆಯ ಅಂಗೀಕೃತ ಸದಸ್ಯರೆಂದು ಪರಲೋಕದಲ್ಲಿ ಬರೆಯಲ್ಪಟ್ಟಿವೆ. ಅಪೋಸ್ತಲನು "ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆಹೋದವರಿಗಿಂತ ಮುಂದಾಗುವುದೇ ಇಲ್ಲ" (1 ಥೆಸ. 4:15) ಎಂದು ಪ್ರಕಟಿಸಿದ್ದಾನೆ. ಕರ್ತನಲ್ಲಿ ನಿದ್ರೆ ಹೋದವರು ಜೀವಿಸುವ ಸದಸ್ಯರು ತಮ್ಮ ಕ್ರಮವನ್ನು ಪೂರೈಸುವವರೆಗೂ ನಿದ್ರೆಯಲ್ಲಿಯೇ ಕಾಯುವ ಅವಶ್ಯಕತೆ ಇಲ್ಲ, ಆದರೆ ಅವರು ಕೂಡಲೇ ಪುನರುತ್ಥಾನ ಹೊಂದಿಕೊಳ್ಳುತ್ತಾರೆ. ಇದು ಕರ್ತನು ತನ್ನ ಮಹಾ ಅಧಿಕಾರವನ್ನು ವಹಿಸಿಕೊಳ್ಳುವಾಗ ಮಾಡುವ ಮೊದಲನೆಯ ಕಾರ್ಯವಾಗಿದೆ. ಹೀಗಾಗಿ ಕರ್ತನಲ್ಲಿ ನಿದ್ರೆ ಹೋದ ಕ್ರಿಸ್ತನ ಸದಸ್ಯರು ಮಹಿಮೆಯನ್ನು ಪ್ರವೇಶಿಸುವಲ್ಲಿ ಆದ್ಯತೆಯನ್ನು ಪಡೆಕೊಳ್ಳುವರು.

ನಿದ್ರೆ ಮಾಡುತ್ತಿರುವ ಭಕ್ತರುಗಳ ಏಳುವಿಕೆಯ ನಿಖರವಾದ ದಿನಾಂಕವು ನೇರವಾಗಿ ಹೇಳಲ್ಪಟ್ಟಿಲ್ಲ, ಆದರೆ ಅದನ್ನು ನಮ್ಮ ಕರ್ತನು ಶ್ರೀಮಂತ ಯೌವನಸ್ತನ

ಸಾಮ್ಯದಿಂದ ಸ್ಪಷ್ಟವಾಗಿ ತೀರ್ಮಾನಿಸಬಹುದು. ರಾಜ್ಯವನ್ನು ಪಡಕೊಂಡವನಾಗಿ ಹಿಂತಿರುಗಿದ ನಂತರ ಶ್ರೀಮಂತ ಯುವಕನು (ಈತನು ನಮ್ಮ ಕರ್ತನಾದ ಯೇಸುವನ್ನು ಪ್ರತಿನಿಧಿಸುತ್ತಾನೆ) ಮೊದಲನೆಯ ಕಾರ್ಯವು ತನ್ನ ಅನುಪಸ್ಥಿತಿಯಲ್ಲಿ ದ್ರಾಕ್ಷೆ ತೋಟದ ಕಾರ್ಯವನ್ನು ವಹಿಸಿಕೊಟ್ಟ ಸೇವಕರೊಂದಿಗೆ (ಆತನ ಸಭೆಯೊಂದಿಗೆ) ಲೆಕ್ಕಾಚಾರಮಾಡುವುದು ಮತ್ತು ನಿಷ್ಠಾವಂತರಿಗೆ ಬಹುಮಾನ ನೀಡುವುದು. ಅಪೋಸ್ತಲನು ಕರ್ತನಲ್ಲಿ ತೀರಿಕೊಂಡವರನ್ನು ಮೊದಲು ಪರಿಗಣಿಸಲಾಗುವುದು ಎಂದು ಹೇಳಿರುವುದರಿಂದ ನಾವು ನ್ಯಾಯಯುತವಾಗಿ ಅವರ ಈ ಬಹುಮಾನ ನೀಡುವಿಕೆಯು ನಮ್ಮ ಕರ್ತನು ಹಿಂದಿರುಗಿ ಬಂದು ಆತನ ಮಹಾ ಅಧಿಕಾರವನ್ನು ವಹಿಸಿಕೊಂಡ ಕೂಡಲೇ ನೆರವೇರಿತೆಂದು ತೀರ್ಮಾನಿಸಬಹುದು.

ನಮ್ಮ ಕರ್ತನು ತನ್ನ ಅಧಿಕಾರವನ್ನು ಚಲಾಯಿಸಲು ಪ್ರಾರಂಭಿಸಿದ ದಿನಾಂಕವನ್ನು ಅರಿತುಕೊಳ್ಳುವುದು ಈ ಕಾರಣದಿಂದ ಆತನ ನಿದ್ರಿಸುತ್ತಿರುವ ಭಕ್ತರುಗಳು ಜೀವದಿಂದ ಮಹಿಮೆಗೆ ಎದ್ದಂದಿನಿಂದ ಎಂಬುದಾಗಿ ಕಂಡುಕೊಳ್ಳಬಹುದು. ಇದನ್ನು ಮಾಡುವಂತೆ ನಾವು ಯೆಹೂದ್ಯ ಮತ್ತು ಸುವಾರ್ತಾ ಹಂಚಿಕೆಗಳ ಸಮಾನಾಂತರಗಳನ್ನು ಜ್ಞಾಪಕಕ್ಕೆ ತಂದುಕೊಳ್ಳ ಬೇಕಾಗುವುದು. ನಮೂನೆಯ ಕಡೆಗೆ ಹಿಂತಿರುಗಿ ನೋಡುವಾಗ ನಾವು ಕ್ರಿ.ಶ. 33ರ ವಸಂತ ಋತುವಿನಲ್ಲಿ, ಯೆಹೂದ್ಯ ಸುಗ್ಗಿಯು ಪ್ರಾರಂಭವಾದ ಮೂರೂವರೆ ವರ್ಷದ ನಂತರ (ಕ್ರಿ.ಶ. 29ರಲ್ಲಿ) ನಮ್ಮ ಕರ್ತನು ಸಾಂಕೇತಿಕವಾಗಿ ಆತನ ಅಧಿಕಾರವನ್ನು ವಹಿಸಿಕೊಂಡನು ಮತ್ತು ಅರಸನ ಅಧಿಕಾರವನ್ನು ಚಲಾಯಿಸಿದನು (ಮತ್ತಾಯ 21:5–15 ನೋಡಿರಿ), ಮತ್ತು ಸ್ಪಷ್ಟವಾಗಿ, ಆ ಕೃತ್ಯದ ಒಂದೇ ಉದ್ದೇಶವು ಆತನು ನಿಜವಾಗಿ ಅರಸನ ಸ್ಥಾನ ಮತ್ತು ಅಧಿಕಾರ ಮುಂತಾದವುಗಳನ್ನು, 1878ರ ವಸಂತ ಋತುವಿನಲ್ಲಿ ವಹಿಸಿಕೊಳ್ಳುವಾಗ, ಆತನ ದ್ವಿತೀಯಾಗಮನದ ಮೂರೂವರೆ ವರ್ಷಗಳ ನಂತರದಲ್ಲಿ ಮೊದಲನೆಯ ಸುಗ್ಗಿಯ ಆರಂಭದಲ್ಲಿ 1874ರ ಶರತ್ಕಾಲದಲ್ಲಿ ಆ ಸುಗ್ಗಿಯ ಸಮಾನಾಂತರ ಸಮಯವನ್ನು ಗುರುತಿಸುವುದು. 1878ನೇ ವರ್ಷವು ನಮ್ಮ ಕರ್ತನು ತನ್ನ ಮಹಾಧಿಕಾರವನ್ನು ವಹಿಸಿಕೊಂಡ ದಿನವೆಂದು ಸೂಚಿತವಾಗುತ್ತದೆ, ಅಲ್ಲಿ ಆತನ ರಾಜ್ಯದ ವ್ಯವಸ್ಥೆಯು ಪ್ರಾರಂಭವಾಯಿತೆಂದು ಸಮಂಜಸವಾಗಿ ತೀರ್ಮಾನಿಸ ಬಹುದು, ಅದರ ಮೊದಲ ಹೆಜ್ಜೆಯು ಆತನ ದೇಹವಾದ ಸಭೆಯ ಬಿಡುಗಡೆ, ಅದರಲ್ಲಿ ನಿದ್ರಿಸುವವರು ಆದ್ಯತೆ ಪಡಕೊಳ್ಳಲಿರುವರು.

ಸಭೆಯ ಪುನರುತ್ಥಾನವು ಅಂತ್ಯದಲ್ಲಿ ಅಥವಾ ಸುಗ್ಗಿಯ ಕಾಲದಲ್ಲಿ ಯಾವಾಗಲಾದರೂ ನೆರವೇರಬೇಕಾಗಿರುವುದರಿಂದ (ಪ್ರಕಟನೆ 11:18), ನಾವು ಅದನ್ನು ಬಹಳ ಸಮಂಜಸವಾದ ತೀರ್ಮಾನವೆಂದು ಒಪ್ಪುತ್ತೇವೆ. ಮತ್ತು ಕರ್ತನ ಯೋಜನೆಯೊಂದಿಗೆ ಸಮರ್ಪಕವಾದ ಸಾಮರಸ್ಯದಲ್ಲಿರುವವರು, 1878ರ ವಸಂತಕಾಲದಲ್ಲಿ ಎಲ್ಲಾ ಪವಿತ್ರ ಅಪೋಸ್ತಲರುಗಳು ಮತ್ತು ಕ್ರಿಸ್ತನಲ್ಲಿ ನಿದ್ರೆ ಹೋದ ಸುವಾರ್ತಾ ಯುಗದ ಉಳಿದ ವಿಜಯಶಾಲಿಗಳು ಅವರ ಕರ್ತನೂ ಒಡೆಯನೂ ಆದ ಕ್ರಿಸ್ತನಂತೆ ಆತ್ಮಸ್ವರೂಪಿಗಳಾಗಿ ಎದ್ದು ಬಂದರು. ಮತ್ತು ನಾವುಗಳು ಅದೇ ಸಮಯದಲ್ಲಿ ಅವರ ಪುನರುತ್ಥಾನವು ನೆರವೇರಿದೆ, ಅವರು ಮತ್ತು ಕರ್ತನು ಲೋಕದಲ್ಲಿ ಉಪಸ್ಥಿತರಿದ್ದಾರೆಂದು ತೀರ್ಮಾನಿಸುತ್ತೇವೆ, ಅವರನ್ನು ನಾವು ನೋಡಲಾರೆವೆಂಬ ಸತ್ಯವು ನಮ್ಮ ನಂಬಿಕೆಯನ್ನು ಅಡ್ಡಿಪಡಿಸುವುದಿಲ್ಲ, ಯಾಕೆಂದರೆ, ಈಗ ಆತನ ಕರ್ತನಂತೆ ಅವರು ಆತ್ಮಸ್ವರೂಪಿಗಳು ಮತ್ತು ಆತನಂತೆ ಅವರು ಜನರಿಗೆ ಅದೃಶ್ಯರು. ಅವರು ಅದೃಶ್ಯರು ಎಂಬ ಸತ್ಯವು, ಅವರ ಸಮಾಧಿಗಳು ತೆರೆಯಲ್ಪಟ್ಟಿಲ್ಲ. ಖಾಲಿಯಾಗಿಲ್ಲ, ಅವರಲ್ಲಿ ಯಾರೂ ಸಮಾಧಿಯಿಂದ ಹೊರಟು ಬಂದದ್ದನ್ನು ಕಂಡಿಲ್ಲ ಎಂಬದು, ಏನನ್ನು ಎದುರುನೋಡಬೇಕು ಎಂದು ಅರಿತವರಿಗೆ ಯಾವ ಅಡಚಣೆಯನ್ನೂ ಉಂಟುಮಾಡುವುದಿಲ್ಲ – ನಮ್ಮ ಕರ್ತನು ತಾನು ಪ್ರವೇಶಿಸಿದ, ಮತ್ತು ಅಲ್ಲಿಂದ ಬಿಟ್ಟುಹೋದ ಬಾಗಿಲು ಮುಚ್ಚಿದ್ದ ಕೋಣೆಯಲ್ಲಿ ಯಾವುದೇ ಕಿಂಡಿಗಳನ್ನು ಬಿಟ್ಟುಹೋಗಲಿಲ್ಲ ಮತ್ತು ಆತನು ತನ್ನ ಸಾಕ್ಷಿಗಳಾಗಿರಬೇಕೆಂದು ವಿಶೇಷವಾಗಿ ತನ್ನನ್ನು ತೋರಿಸಿಕೊಂಡ ಕೆಲವರ ಹೊರತಾಗಿ ಬೇರೆ ಯಾರೂ ಸತ್ತು ಜೀವಿತನಾಗಿ ಬಂದ ವಿಮೋಚಕನನ್ನು ಕಣ್ಣಾರೆ ಕಂಡಿಲ್ಲವೆಂಬುದನ್ನು ಅವರು ನೆನಪು ಮಾಡಿ ಕೊಳ್ಳುತ್ತಾರೆ. ಆತನು ಇನ್ನೂ ಮಾಂಸಧಾರಿಯಾಗಿಯೇ ಇದ್ದಾನೆಂದು, ಅಥವಾ ಆತನು ಕಾಣಿಸಿಕೊಂಡ ಯಾವ ರೂಪವಾದರೂ ಆತನ ಮಹಿಮೆಯುಳ್ಳ ಆತ್ಮೀಕ ದೇಹ ಎಂದು ಆತನ ಸಾಕ್ಷಿಗಳು ತಿಳುಕೊಳ್ಳದಂತೆ ಆತನು ಮಾಂಸಧಾರಿಯ ವಿವಿಧರೂಪಗಳಲ್ಲಿ ಕಾಣಿಸಿಕೊಂಡನು ಎಂಬುದನ್ನೂ ಅವರು ನೆನಪಿಸಿಕೊಳ್ಳುತ್ತಾರೆ. ಅವರುಗಳು ತಾರ್ಸದ ಸೌಲನು ಮಾತ್ರವೇ ಕ್ರಿಸ್ತನ ಆತ್ಮೀಕ ಶರೀರವನ್ನು ನೋಡಿದವನೆಂಬುದನ್ನು, ಆದರೆ ಪವಾಡಸದೃಶವಾಗಿ ಆತನ ಸುತ್ತಲೂ ಇದ್ದವರು ಅದನ್ನು

ನೋಡಲಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಂಡಿರುತ್ತಾರೆ. ಆತನು ದೃಷ್ಟಿಯನ್ನು ಕಳೆದುಕೊಳ್ಳುವಷ್ಟು ಎಂಬದನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಅವರು ಪುನರುತ್ಥಾನ ಹೊಂದಿದ ಸಂತರನ್ನು ತಮ್ಮ ನೈಸರ್ಗಿಕ ಕಣ್ಣುಗಳಿಂದ ನೋಡದಿರುವುದು ಪುನರುತ್ಥಾನದ ಸತ್ಯಕ್ಕೆ ಆಕ್ಷೇಪಣೆ ಅಲ್ಲ ಮತ್ತು ಅವರು ಕರ್ತನನ್ನು ಸುಗ್ಗಿಯ ಸಮಯದಲ್ಲಿ ನೋಡಿರುವುದಿಲ್ಲ, ಮತ್ತು ಅವರು ಸುವಾರ್ತಾ ಯುಗದಲ್ಲೆಲ್ಲಾ ರಕ್ಷಣೆಯ ಬಾಧ್ಯಸ್ಥರಾಗುವವರಿಗೆ* ಸೇವೆ ಮಾಡಲು ಸೇವಾ ಆತ್ಮಗಳಾಗಿ ಕಳುಹಿಸಿಕೊಟ್ಟ ದೇವದೂತರುಗಳನ್ನೂ ನೋಡಿಲ್ಲ.

1878ರ ಏಪ್ರಿಲ್‌ನಲ್ಲಿ ರಾಜ್ಯವು ಸ್ಥಾಪಿತಗೊಳ್ಳಲು ಅಥವಾ ಅಧಿಕಾರಕ್ಕೆ ಬರಲು ಪ್ರಾರಂಭವಾಗಿದೆ ಎಂಬ ನಮ್ಮ ನಂಬಿಕೆಯು, ಅದನ್ನು ಗಮನಿಸುವಾಗ ಅದು ನಮ್ಮ ಕರ್ತನು 1874ರ ಅಕ್ಟೋಬರ್‌ನಲ್ಲಿ ಪ್ರತ್ಯಕ್ಷಗೊಂಡನು ಮತ್ತು ಸುಗ್ಗಿಯು ಆಗ ಪ್ರಾರಂಭವಾಯಿತು ಎಂಬ ನಂಬಿಕೆಯ ಅದೇ ಬುನಾದಿಯ ಮೇಲೆ ನಿಂತಿದೆ. ಅಂತ್ಯದಲ್ಲಿ ಯೆಹೋವನ ಮಂದಿರದ ಬೆಟ್ಟವು (ರಾಜ್ಯ) ಗುಡ್ಡಬೆಟ್ಟಗಳಿಗಿಂತ (ಭೂಮಿಯ ರಾಜ್ಯಗಳು) ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವದು ಮತ್ತು ಬಾಬೇಲಿನ, ಕ್ರೈಸ್ತ ಪ್ರಪಂಚದ ಮತ್ತು ಲೋಕದ ಎಲ್ಲಾ ರಾಷ್ಟ್ರಗಳ ನ್ಯಾಯತೀರ್ವಿಕೆ ಪ್ರಾರಂಭವಾಗಿ, ಅವರ ಅಂತಿಮ ಉರುಳುವಿಕೆಯ ಸಿದ್ಧತೆಯಾಗುತ್ತಿದೆ.

ರಾಜವಂಶಸ್ಥ ಯಾಜಕವರ್ಗದ ಕಡೆಯ ಕೆಲವು ಸದಸ್ಯರುಗಳು ಈಗಲೂ ಜೀವದಿಂದ ಉಳಿದು ಕೊಂಡಿರುವಾಗ, ಸಭೆಯ ಬಹುಪಾಲು ಉನ್ನತಿ ಹೊಂದಿರುವರು ಎಂಬುದು ಈ ಆಲೋಚನೆ ಯೊಂದಿಗಿನ ಸಾಮರಸ್ಯಕ್ಕೆ ಹೊರತಲ್ಲ; ಯಾಕೆಂದರೆ, ನಾವು ಕಂಡುಕೊಳ್ಳುವಂತೆ, ಅಪೋಸ್ತಲ ಈ ಕ್ರಮದ ಬಗ್ಗೆಯೇ ಮುಂತಿಳಿಸಿದ್ದಾನೆ. "ಜೀವದಿಂದ ಉಳಿದುಕೊಂಡವ"ರೊಡನೆ ಇರುವುದು ಅಗೌರವವಲ್ಲ. ಮಾರ್ಪಾಡಾಗಬೇಕಾದವರಲ್ಲಿ ಕಟ್ಟಕಡೆಯುವ ರಾಗುವುದು ಅಪಖ್ಯಾತಿಯೂ ಅಲ್ಲ. ಅನೇಕ ವಚನಗಳು ತಿಳಿಸುವುದೇನೆಂದರೆ ದೇಹದ ಕಡೆಯ ಸದಸ್ಯರು ಪರದೆಯ ಈಚೆ ಕಡೆಯಲ್ಲಿ ಮಾಡಬೇಕಾದ ವಿಶೇಷ ಕಾರ್ಯಗಳು ಎಷ್ಟು ಮುಖ್ಯವಾದವುಗಳಾಗಿವೆಯೋ ಅಷ್ಟೇ ಪ್ರಮಾಣದಲ್ಲಿ ಪರದೆಯ ಆಚೆ ಬದಿಯಲ್ಲಿರುವವರ ಮಹಿಮೆ ಹೊಂದಿರುವ ಸದಸ್ಯರು ರಾಜ್ಯದಲ್ಲಿ ಮಾಡಬಹುದಾದ ಕೆಲಸದಷ್ಟೇ ಮುಖ್ಯವಾಗಿದೆ ಎಂದು ಹೇಳುತ್ತವೆ. ಪರದೆಯ ಆಚೆಯಲ್ಲಿರುವ ಮಹಿಮೆ ಹೊಂದಿದ ಶಿರಸ್ಸು ಮತ್ತು ದೇಹದ ಸದಸ್ಯರುಗಳು ಪ್ರಗತಿಯಲ್ಲಿರುವ ಮತ್ತು ಈ ಲೋಕದಲ್ಲಿ ಇಷ್ಟರಲ್ಲೇ ಪ್ರಾರಂಭಗೊಳ್ಳಲಿರುವ ಮಹಾ ಬದಲಾವಣೆಗಳ ಮೇಲೆ ಸಂಪೂರ್ಣವಾದ ಮೇಲ್ವಿಚಾರಣೆಯನ್ನು ಹೊಂದಿದ್ದಾರೆ. ದೇಹಧಾರಿಗಳಾಗಿ ಈ ಲೋಕದಲ್ಲಿ ಉಳಿದುಕೊಂಡಿರುವ ಸದಸ್ಯರುಗಳು ಅದನ್ನು ಮಾತಿನಲ್ಲಿ, ಲೇಖಣಿಯ ಮೂಲಕ ಮತ್ತು ಕರಪತ್ರಗಳ ಮೂಲಕ "ಮಹಾ ಸಂತೋಷದ ಶುಭಸಮಾಚಾರವನ್ನು" ಪ್ರಕಟಿಸುವ ರಾಜ್ಯದ ಪಾರುಪತ್ಯಗಾರರಾಗಿದ್ದಾರೆ. ದೇವರ ದಯಾ ಪೂರ್ವಕವಾದ ಯುಗಗಳ ಆಶೀರ್ವಾದದ ಬಗ್ಗೆ ಅವರು ಲೋಕಕ್ಕೆ ಹೇಳುವವರಾಗಿದ್ದಾರೆ ಮತ್ತು ಆ ಯೋಜನೆಯ ಭವ್ಯವಾದ ನೆರವೇರಿಕೆಯ ಸಮಯವು ಹತ್ತಿರವಾಗಿದೆ; ಅವುಗಳು ಸಮೀಪಿಸುತ್ತಿರುವ ಮಹಾ ಸಂಕಟದ ಸಮಯವನ್ನು ಸೂಚಿಸುವುದು ಮಾತ್ರವಲ್ಲ ಈ ಲೋಕದಲ್ಲಿ ದೇವರ ರಾಜ್ಯವನ್ನು ಸ್ಥಾಪಿಸುವುದರ ಫಲವಾಗಿ ಅದನ್ನು ಅನುಸರಿಸುವ ಆಶೀರ್ವಾದಗಳ ಬಗ್ಗೆಯೂ ಸೂಚಿಸುತ್ತವೆ. ಆಗ, ಮಹತ್ವವಾದ ಮತ್ತು ಮುಖ್ಯವಾದ ಕಾರ್ಯವನ್ನು ಉಳಿದ ಸದಸ್ಯರಿಗೆ ನೀಡಲಾಗುವುದು; ಅದು ನಿಜವಾಗಿಯೂ ರಾಜ್ಯದ ಕಾರ್ಯವಾಗಿದೆ ಮತ್ತು ಅದು ರಾಜ್ಯದ ಸಂತೋಷವನ್ನೂ, ಆಶೀರ್ವಾದಗಳನ್ನೂ ತನ್ನೊಂದಿಗೆ ಹೊಂದಿಕೊಂಡಿದೆ. ಇನ್ನೂ ದೇಹಧಾರಿಗಳಾಗಿದ್ದು ತಮಗೆ ನೇಮಕವಾದ ಕೆಲಸಗಳನ್ನು ಸ್ವಾರ್ಥ ತ್ಯಾಗದ ಮೌಲ್ಯದಲ್ಲಿ ಮತ್ತು ಬಹಳ ವಿರೋಧವನ್ನು ಎದುರಿಸುತ್ತಾ ಮುಂದುವರೆಸುತ್ತಿರುವವರು ಈಗಾಗಲೇ ಅವರ ಕರ್ತನ ಸಂತೋಷದಲ್ಲಿ, ದೇವರ ಯೋಜನೆಯ ಪೂರ್ಣ ಮೆಚ್ಚುಗೆಯಲ್ಲಿ ಮತ್ತು ಆ ಕಾರ್ಯವನ್ನು ಕೈಗೊಳ್ಳುವ ಸದಾವಕಾಶದ ಆನಂದದಲ್ಲಿ ಪ್ರವೇಶಿಸುತ್ತಿರುವರು ಮತ್ತು ಅವರ ಕರ್ತನ ಮತ್ತು ವಿಮೋಚಕನೊಡನೆ ಸಂಯೋಗದೊಂದಿಗೆ ಈ ಲೋಕದ ಎಲ್ಲಾ ಕುಟುಂಬದವರಿಗೆ ನಿತ್ಯಜೀವವನ್ನು ನೀಡುವ ಸಂದರ್ಭದಲ್ಲಿ ತಮ್ಮನ್ನು ತೊಡಗಿಸಿಕೊಂಡು ಉಲ್ಲಾಸಪಡುವುವವರಾಗಿದ್ದಾರೆ.

ಇವರುಗಳು ಪ್ರವಾದಿಯಾದ ಯೆಶಾಯನ ಸಂದೇಶದ ಮೂಲಕ ಸ್ಪಷ್ಟವಾಗಿ "ಪಾದ" ಸದಸ್ಯರೆಂದು ಅಥವಾ ದೇಹಧಾರಿಯಾದ ಕ್ರಿಸ್ತನ ಶರೀರದ ಕಡೆಯ ಸದಸ್ಯರೆಂದು ಸೂಚಿಸಲ್ಪಟ್ಟಿದ್ದಾರೆ. ಆತನು ಹೇಳುವುದೇನೆಂದರೆ – "ಪರ್ವತಗಳ (ರಾಜ್ಯಗಳ) ಮೇಲೆ ತ್ವರೆಪಡುತ್ತಾ ಶುಭ ಸಮಾಚಾರವನ್ನು ತಂದು

* See Vol II, Chapter V

ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು (ಬಿಡುಗಡೆಯನ್ನು) ಪ್ರಕಟಿಸುತ್ತಾ – ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ (ಕ್ರಿಸ್ತನ ಆಳ್ವಿಕೆಯು ಮೊದಲಿಗೆ ಚಿಯೋನನ್ನು ಬಿಡುಗಡೆಗೊಳಿಸುತ್ತದೆ ಮತ್ತು ಕಡೆಯಲ್ಲಿ ಎಲ್ಲಾ ನರಳುವ ಸೃಷ್ಟಿಗೆ ಬಿಡುಗಡೆಯು ಪ್ರಾರಂಭವಾಗುತ್ತದೆ) ಎಂದು ಚಿಯೋನಿಗೆ ತಿಳಿಸುವವನಾಗಿದ್ದಾನೆ, ಇಗೋ, ನಿನ್ನ ಕಾವಲುಗಾರರ ಕೂಗು! ಸ್ವರವೆತ್ತಿ ಒಟ್ಟಿಗೆ ಹರ್ಷಧ್ವನಿಗೈಯುತ್ತಾರೆ. ಯೆಹೋವನು ಚಿಯೋನಿಗೆ ತಿರುಗಿ ಬರುವುದನ್ನು ಪ್ರತ್ಯಕ್ಷವಾಗಿ (ಸ್ಪಷ್ಟವಾಗಿ) ನೋಡುತ್ತಿದ್ದಾರೆ" – ಯೆಶಾಯ 52:7–8.

ಜಜ್ಜಲ್ಪಟ್ಟ ಬಡ "ಪಾದ"ವು ಈಗ ಮಾನವರಿಂದ ಹೀನೈಸಲ್ಪಟ್ಟಿದ್ದು, ಪ್ರಸ್ತುತ ಸತ್ಯವನ್ನು ಎತ್ತಿಹಿಡಿಯುವಲ್ಲಿ ನೀವು ಹೊಂದಿದ ಸಂತೋಷವನ್ನು ನೀವೇ ಹೊರತು ಬೇರೆ ಯಾರೂ ಪ್ರಶಂಸಿಸುವುದಿಲ್ಲ. ಚಿಯೋನಿನಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸುವ ಸಮಯ ಹತ್ತಿರದಲ್ಲಿದೆ ಮತ್ತು ಇಮ್ಮಾನುವೇಲನ ನೀತಿವಂತಿಕೆಯ ಆಳ್ವಿಕೆಯು ಪ್ರಪಂಚದ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸುವಲ್ಲಿ ಸಧ್ಯದಲ್ಲಿಯೇ ಪ್ರಾರಂಭವಾಗುವುದು ಎಂಬ ಪ್ರಸ್ತುತ ಸತ್ಯವನ್ನು ಪ್ರಕಟಿಸುವಲ್ಲಿ ನೀವಲ್ಲದೆ ಬೇರೆ ಯಾರೂ ಹರ್ಷಿಸುತ್ತಾ ಮೆಚ್ಚಿಕೊಳ್ಳುವದಿಲ್ಲ. ಆದರೆ, ಜನರಿಂದ ಹೀನೈಸಲ್ಪಟ್ಟಿದ್ದರೂ, ಕ್ರಿಸ್ತನ 'ಪಾದವು' ಮತ್ತು ಅದರ ಪ್ರಸ್ತುತ ನಿಯೋಗವು ಪರದೆಯ ಆಚೆಬದಿಯಲ್ಲಿ ದೇಹದ ಮಹಿಮೆ ಹೊಂದಿದ ಪವಿತ್ರ ಸದಸ್ಯರ ಮತ್ತು ಅವರ ಮಹಿಮಾ ಶಿರಸ್ಸಿನಿಂದ ಉನ್ನತವಾಗಿ ಮಾನ್ಯತೆಯನ್ನು ಹೊಂದಿದೆ. ಆ ಶಿರಸ್ಸು ಅಂತಹ ನಂಬಿಗಸ್ತರನ್ನು ತನ್ನ ತಂದೆಯ ಮತ್ತು ಆತನ ಎಲ್ಲಾ ಪವಿತ್ರ ದೂತರುಗಳ ಮುಂದೆ ಒಪ್ಪಿಕೊಳ್ಳಲು ಮನಸ್ಸುಳ್ಳವನಾಗಿದ್ದಾನೆ.

ಪಾದದ ನಿಯೋಗವು ಅತ್ಯಲ್ಪವಾಗಿರದೆ ರಾಜ್ಯದ ಅಂಶವನ್ನು ನೆರವೇರಿಸಲಿರುವುದು. ಅವರ ಸಂದೇಶವು ಜನಾಧರಣೀಯವಾಗಿ ದ್ವೇಷಿಸತಕ್ಕದಾದರೂ, ಅಪಕೀರ್ತಿಯುಳ್ಳದ್ದಾಗಿದ್ದರೂ ಮತ್ತು ಅವರುಗಳು ಈ ಲೋಕದವರಿಂದ ಮೂರ್ಖರು (ಕ್ರಿಸ್ತನಿಗಾಗಿ) ಎಂಬದಾಗಿ ತಿರಸ್ಕರಿಸಲ್ಪಟ್ಟಿದ್ದಾರೆ – ಹೇಗೆ ಆತನ ಎಲ್ಲಾ ಪ್ರಾಮಾಣಿಕ ಸೇವಕರುಗಳು ಸುವಾರ್ತಾ ಯುಗದಲ್ಲೆಲ್ಲಾ ಕ್ರಿಸ್ತನ ಸಲುವಾಗಿ ಹೀನೈಸಲ್ಪಟ್ಟಂತೆಯೇ – ಹಾಗೆಯೇ, ಅವರುಗಳು ರಾಜ್ಯದ ಪಾರುಪತ್ಯಗಾರರಾಗಿ ಮಾರ್ಪಟ್ಟು ತೆರೆಯ ಆಚೆ ಮಹಿಮೆ ಹೊಂದಿದ ಸದಸ್ಯರನ್ನು ಸೇರಿ ಕೊಳ್ಳುತ್ತಾರೆ ಮತ್ತು ಅದರ ಪ್ರಸ್ತುತ ಮತ್ತು ಮುಂದಿನ ಕಾರ್ಯಗಳನ್ನು ಬಹಳ ಮಹತ್ವವಾದ ಮಹಾಹಿತಿಯೆಂಬುದಾಗಿ ಜಗತ್ತಿಗೂ ಮತ್ತು ಪ್ರಗತಿಹೊಂದದಿರುವ ಮತ್ತು ಲೋಕದ ಜಂಜಾಟದಲ್ಲಿ ವಿಪರೀತ ಹೊರೆಹೊತ್ತ ಮಕ್ಕಳಿಗೂ ಬಿಟ್ಟುಕೊಟ್ಟಿದ್ದಾರೆ. ಯಾಕೆಂದರೆ, ಅವರುಗಳು ದೇವರಿಗೆ ಪ್ರತಿಷ್ಠಿಸಲ್ಪಟ್ಟಿದ್ದರೂ ಮಹಾ ಕರೆಯ ಬಹುಮಾನವನ್ನು ಗೆಲ್ಲುವಲ್ಲಿ ಸೋತು ಹೋದವರಾಗಿದ್ದಾರೆ .

'ಪಾದ'ದವರಾದ ಪ್ರತಿಯೊಬ್ಬರೂ ಚಿಯೋನಿಗೆ "ನಿಮ್ಮ ದೇವರು ಆಳುತ್ತಾನೆ, ಕ್ರಿಸ್ತನ ರಾಜ್ಯವು ಪ್ರಾರಂಭವಾಗಿದೆ" ಎಂಬ ಈ ಸುವಾರ್ತಾಮಾನವನ್ನು ಪ್ರಕಟಿಸುವಲ್ಲಿ ನಿರತರಾಗಿರುತ್ತಾರೆ ಎಂಬುದನ್ನು ನಾವು ಮರೆಯದಿರೋಣ. ಯಾರು ನಿಜವಾದ ಕಾವಲುಗಾರ ರಾಗಿದ್ದಾರೋ ಅಂಥವರು ಈ ಸಮಯದಲ್ಲಿ ಸ್ಪಷ್ಟವಾಗಿ ನೋಡುವವರಲ್ಲಿ ಒಬ್ಬನಾಗಿ ಹಾಗೂ ಒಟ್ಟುಗೂಡಿ ಮೋಶೆಯ ಮತ್ತು ಯಜ್ಞದ ಕುರಿಯಾದಾತನ ಹೊಸ ಹಾಡನ್ನು ಸಾಮರಸ್ಯದಿಂದ ಹಾಡಬಹುದು – ಪುನರುತ್ಥಾನದ ಹಾಡು. ಅದನ್ನು ಬರಲಿರುವ ಶುಭಸಮಾಚಾರದ ಛಾಯೆಯಾಗಿದ್ದ ಮೋಶೆಯ ಧರ್ಮಶಾಸ್ತ್ರದಲ್ಲಿ ಕಲಿಸಿಕೊಟ್ಟದ್ದು ಮಾತ್ರವಲ್ಲ, ಇನ್ನೂ ಬಹಳ ಸ್ಪಷ್ಟವಾಗಿ ಹೊಸಒಡಂಬಡಿಕೆಯ ಬರಹಗಳಲ್ಲಿ ಬರೆಯಲ್ಪಟ್ಟ – "ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ... ಎಲ್ಲಾ ಜನಾಂಗಗಳೂ ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು" – ಪ್ರಕಟನೆ 15:3,4.

ಪಾದ ವರ್ಗದವರಲ್ಲಿ ಒಬ್ಬರ ನಂತರ ಒಬ್ಬರು ಹಲವೊಮ್ಮೆ ಬಳಲಿದರೂ ಮತ್ತು ಗಾಯಪಟ್ಟರೂ ಹರ್ಷಿಸುತ್ತಾ ಪ್ರಸ್ತುತ ಪರಿಸ್ಥಿತಿಯಿಂದ ಹಾದು ಹೋಗುವರು. ಅವರು ಯಾವಾಗಲೂ ಪರದೆಯ ಆಚೆಯ ಬದಿಗೆ ಕ್ಷಣಮಾತ್ರದಲ್ಲಿ, ರೆಪ್ಪೆ ಬಡಿಯುವಷ್ಟರಲ್ಲಿ, ಮರಣಾವಸ್ಥೆಯಿಂದ ಅಮರತ್ವಕ್ಕೆ, ನಿರ್ಬಲಾವಸ್ಥೆಯಿಂದ ಬಲಾವಸ್ಥೆಗೆ ಅವಮಾನದಿಂದ ಗೌರವಕ್ಕೆ, ಮಾನವ ಸ್ಥಿತಿಯಿಂದ ಪರಲೋಕದ ಪರಿಸ್ಥಿತಿಗೆ, ಮಾನವ ದೇಹದಿಂದ ಆತ್ಮೀಕ ದೇಹಕ್ಕೆ ಬದಲಾಗುವರು. ಈ ಬದಲಾವಣೆಯಿಂದ ಅವರ ಕಾರ್ಯವು ಮುಗಿದು ಹೋಗುವುದಿಲ್ಲ. ಮಹಿಮೆಯ ಆ ಬದಲಾವಣೆಗೆ ಯೋಗ್ಯರೆಂದು ಎಣಿಸಲ್ಪಟ್ಟವರು ಈಗಾಗಲೇ ಪರದೆಯ ಈಚೆ ಬದಿಯಲ್ಲಿ ಆತನ ಸೇವೆಗಾಗಿ ಪಟ್ಟಿ ಮಾಡಲ್ಪಟ್ಟಿದ್ದಾರೆ; ಅವರ ಆಯಾಸ, ಶ್ರಮೆಯ ಲಕ್ಷಣಗಳು ಬದಲಾವಣೆಯಿಂದ ಕೊನೆಗೊಳ್ಳುವವು. "ಅವರ ಕಷ್ಟವು ತೀರಿತು, ಅವರಿಗೆ ವಿಶ್ರಾಂತಿ ಯಾಗುವುದು. ಅವರ ಸುಕೃತ್ಯಗಳು ಅವರೊಡನೆ ಬರುವವು" – ಪ್ರಕಟನೆ 14:13.

ಈ 'ಪಾದ' ಸದಸ್ಯರಿಗೆ "ಮಾರ್ಪಡುವಿಕೆ" ಈಗಾಗಲೇ ನಿದ್ರೆ ಹೊಂದಿದವರು ಪ್ರವೇಶಿಸಿರುವ ಮಹಿಮೆ ಮತ್ತು ಅಧಿಕಾರದ ಸಾಂಗತ್ಯಕ್ಕೆ ತರುತ್ತದೆ; ಅವರುಗಳು ಈಗಾಗಲೇ ತೋರಿಸಿರುವಂತೆ ಭೂಲೋಕದ ಸ್ಥಿತಿಯಿಂದ ಮೇಲೆತ್ತಲ್ಪಟ್ಟು, ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ಅವರ ಸಂಗಡದಲ್ಲಿ ಮೇಘವಾಹನರಾಗಿ ಒಯ್ಯಲ್ಪಡುವರು. ಈ ಲೋಕದ ಆತ್ಮೀಕ ಆಡಳಿತಕ್ಕೆ ಸೇರುವಂತೆ ದೂರಕ್ಕೆ ಸೆಳೆಯಲ್ಪಡುವರು*. ಇಲ್ಲಿ ಹೇಳಿರುವ 'ಗಾಳಿ'ಯು ಆತ್ಮಿಕ ಆಡಳಿತ ಅಥವಾ ಅಧಿಕಾರವನ್ನು ಚಿತ್ರಿಸುತ್ತದೆ. ಸೈತಾನನು ಬಹಳ ಕಾಲದಿಂದ 'ವಾಯುಮಂಡಲದಲ್ಲಿ ಅಧಿಕಾರ ನಡೆಸುವವನು' ಎಂಬ ಸ್ಥಾನವನ್ನು ಹಿಡಿದುಕೊಂಡಿದ್ದಾನೆ (ಎಫೆಸ 2:2) ಮತ್ತು ಅದನ್ನು ಆತನ ಜೊತೆ ಕೆಲಸದವರಿಗೂ ಬಾಬೇಲಿನ ಅನೇಕ ಮಹಾ ಜಂಟಿ ಆಡಳಿತಗಾರರಿಗೂ ಉಪಯೋಗಿಸಲಾಗಿದೆ. ಅವರುಗಳು ಆತನ ಕುರುಡಾಗಿಸುವ ತಪ್ಪುಗಳ ಅಡಿಯಲ್ಲಿ ತಾವು ದೇವರ ಸೇವೆ ಮಾಡುತ್ತಿದ್ದೇವೆಂಬ ಆಲೋಚನೆಯುಳ್ಳವ ರಾಗಿದ್ದಾರೆ. ಆದರೆ ಉಚಿತ ಸಮಯದಲ್ಲಿ 'ವಾಯುಮಂಡಲದ ಪ್ರಸ್ತುತ ಅರಸನು' ಬಂಧಿಸಲ್ಪಡುತ್ತಾನೆ ಮತ್ತು ಯಾರನ್ನೂ ಇನ್ನು ಮುಂದೆ ಆತನು ಮೊಸಗೊಳಿಸಲಾರನು; ಮತ್ತು ವಾಯು ಮಂಡಲದ ನೂತನ ಅರಸನು, ಸತ್ಯವಾದ ಆತ್ಮೀಕ ಅರಸನಾದ ಯೇಸು ಕ್ರಿಸ್ತನು ಪ್ರಭುತ್ವವನ್ನು ವಹಿಸಿಕೊಂಡು ನೂತನ ಆಕಾಶಮಂಡಲವನ್ನು ಸ್ಥಾಪಿಸಿ ತನ್ನನ್ನು ಈ ಅಧಿಕಾರದಲ್ಲಿ, ಆತನ ವಧುವಿನಲ್ಲಿ. ಸುವಾರ್ತಾಯುಗದ ಜಯವೀರರಲ್ಲಿ ಅನ್ಯೋನ್ಯಗೊಳಿಸಿ ಕೊಳ್ಳುವಾಗ ಪ್ರಸ್ತುತ ಆಕಾಶಮಂಡಲವು, ಕ್ರಿಸ್ತನ ಮಹಾವಿರೋಧಿ ಪದ್ಧತಿಯು ಮಹಾ ಶಬ್ದದೊಡನೆ ಗತಿಸಿಹೋಗುವುದು. ಈ ರೀತಿಯಲ್ಲಿ ನೂತನ ಆಕಾಶಮಂಡಲದ ಅಧಿಕಾರವು ಪ್ರಸ್ತುತ ವಾಯುಮಂಡಲದ ಶಕ್ತಿಯನ್ನು ಸ್ಥಾನ ಚ್ಯುತಿಗೊಳಿಸಲಾಗುವುದು.

ಆದರೆ ಎಲ್ಲರೂ – ಕರ್ತನ ಪ್ರಸನ್ನತೆಯ ತನಕ ಜೀವದಿಂದಿರುವ 'ಪಾದ'ದ ಎಲ್ಲಾ ಸದಸ್ಯರೂ ಮರಣ ಹೊಂದಿಕೊಳ್ಳಬೇಕೇ? ಹೌದು; ಅವರೆಲ್ಲರೂ ತಾವಾಗಿ ಮರಣಪರ್ಯಂತ ತಮ್ಮನ್ನು ಪ್ರತಿಷ್ಠೆಮಾಡಿಸಿ ಕೊಂಡವರು. ಇವರ ಬಗ್ಗೆ ನಿರ್ದಿಷ್ಟವಾಗಿ ಅವರು ಸಾಯಲೇಬೇಕು ಎಂಬುದಾಗಿ ಬರೆದದೆ. ದೇವರ ಪರಿಶುದ್ಧ ಗ್ರಂಥವು ಈ ಆಲೋಚನೆಯ ಬಗ್ಗೆ ಪ್ರತಿಯಾಗಿ ಹೇಳುವುದಿಲ್ಲ. ದೇವರು ಪ್ರವಾದಿಯ ಮೂಲಕ "ನೀವು ದೇವರುಗಳು (ಬಲಶಾಲಿಗಳು)!, ಎಲ್ಲರೂ ಪರಾತ್ಪರ ಮಕ್ಕಳು (ದೇವರು) ಎಂದು ನಾನು ಹೇಳಿದೆನು. ಆದರೂ ನರರಂತೆ (ಅಕ್ಷರಶಃ ಮನುಷ್ಯರಂತೆ) ಸತ್ತೇ ಹೋಗುವಿರಿ; ಪ್ರತಿಯೊಬ್ಬ ಪ್ರಭುವಿನಂತೆ ನೀವೆಲ್ಲರೂ ಬಿದ್ದು ಹೋಗುವಿರಿ" (ಕೀರ್ತನೆ 82:6,7) ಎಂದು ಪ್ರಕಟಿಸಿದ್ದಾನೆ.

ಇಲ್ಲಿ "princes" ಎಂಬುದಾಗಿ ತರ್ಜುಮೆ ಗೊಳಿಸಿರುವ ಪದವು ಮುಖ್ಯಸ್ಥರನ್ನು ಇಲ್ಲವೆ 'ಶಿರಸ್ಸುಗಳನ್ನು' ಎಂಬುದನ್ನು ಸೂಚಿಸುತ್ತದೆ. ಆದಾಮ ಮತ್ತು ನಮ್ಮ ಕರ್ತನಾದ ಯೇಸು ಇವರುಗಳು ಎರಡು ಶಿರಸ್ಸುಗಳು (ಅಥವಾ "princes"ಗಳು). ಇಬ್ಬರೂ ಮರಣಹೊಂದಿದ್ದರು, ಆದರೆ ವಿವಿಧ ಕಾರಣಗಳಿಗಾಗಿ, ಆದಾಮನು ತನ್ನ ಸ್ವಂತ ಪಾಪದ ದೆಸೆಯಿಂದ ಮರಣಹೊಂದಿದನು, ಆದರೆ ನಮ್ಮ ಕರ್ತನಾದ ಯೇಸು ಲೋಕದ ಪಾಪಕ್ಕಾಗಿ ತನ್ನನ್ನೇ ಇಚ್ಛಾಪೂರ್ವಕವಾಗಿ ಸಮರ್ಪಿಸಿದನು. ಕ್ರಿಸ್ತನ ಎಲ್ಲಾ ಸಭೆಯು, ಆತನ ಈ ತ್ಯಾಗದಲ್ಲಿ ನಂಬಿಕೆ ಮೂಲಕ ನೀತಿನಿರ್ಣಯಗೊಂಡರು ಮತ್ತು ಆದಾಮನ ಪಾಪದಿಂದ ಮುಕ್ತರಾದರು, ಹಾಗೂ ಅವರುಗಳು ಕ್ರಿಸ್ತನೊಂದಿಗೆ ಸಹ ತ್ಯಾಗಿಗಳಾಗಿ ಹಂಚಿಕೊಳ್ಳುವವರಾದರು. ಆ ಪಾಪಕ್ಕೆ ಅಂಟಿ ಕೊಂಡಿರುವ ಮರಣವೆಂಬ ಶಿಕ್ಷೆಯಿಂದ ಮುಕ್ತಿ ಗೊಂಡವರಾಗಿ ಎಣಿಸಲ್ಪಟ್ಟರು. ಆ ಕ್ರಮದಲ್ಲಿ ಅವರು ಕ್ರಿಸ್ತನೊಂದಿಗೆ ಜೊತೆ ಸಮರ್ಪಕರಾಗುವುದರ ಮೂಲಕ ಭಕ್ತರ ಮರಣವು ದೇವರಿಂದ – "ಯೆಹೋವನು ತನ್ನ ಭಕ್ತರ ಮರಣವನ್ನು ಅಲ್ಪವೆಂದು ಎಣಿಸುವುದಿಲ್ಲ" (ಕೀರ್ತನೆ 116 :15) ಎಂಬುದಾಗಿ ಪ್ರಶಂಸಿಸಲ್ಪಟ್ಟಿತು. ಕ್ರಿಸ್ತನ ದೇಹದ ಜೊತೆ ಅಂಗಗಳು, ಅವರು ಸಾಯುವಾಗ "ಕ್ರಿಸ್ತನೊಂದಿಗೆ ಮರಣ ಹೊಂದಿದರು" ಮತ್ತು "ಆತನ ಮರಣದವರೆಗೆ ಅನುಕೂಲತೆವುಳ್ಳವರಾಗಿ ಮಾಡಲ್ಪಟ್ಟವರು" (Made comfortable unto his death") ಎಂಬುದಾಗಿ ಎಣಿಸಲ್ಪಡುವರು. ಅವರುಗಳು ರಾಜರಲ್ಲಿ ಒಬ್ಬನಾಗಿ ಬೀಳುವರು – ಮೊದಲನೆಯವಂತೆ ಅಲ್ಲ, ಆದರೆ ಎರಡನೆವನಾದ ಆದಾಮನಂತೆ, ಆತನ ದೇಹದ ಅಂಗಗಳಾಗಿ ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಅನುಭವಿಸಿ ತೀರಿಸುತ್ತಾ ಸ್ಥಾನ ಭರಿಸುವರು (ಕೊಲೊಸ್ಸೆ 1:24).

'ದೇವರುಗಳು' ಅಥವಾ 'ಬಲಶಾಲಿಗಳು' ಎಂಬ ಪದವು ಈ ಪರಿಚ್ಛೇಧದಲ್ಲಿ "ಪರಮೋಚ್ಚ ದೇವರ" ಎಲ್ಲಾ ಮಕ್ಕಳಿಗೂ ಅನ್ವಯವಾಗುತ್ತದೆ. ಅವರುಗಳು

---

* (Vol I, page 318) .

ಕ್ರಿಸ್ತನೊಂದಿಗೆ ಜೊತೆಬಾಧ್ಯಸ್ತರುಗಳಾಗಿ, ಎಲ್ಲಾ ಸಂಗತಿಗಳಿಗೂ ಬಾಧ್ಯಸ್ಥರಾಗಿದ್ದಾರೆ ಎಂಬುದನ್ನು ಅದಕ್ಕೆ ಸಂಬಂಧಿಸಿದ ಕ್ರಿಸ್ತನ ಉಲ್ಲೇಖದಲ್ಲಿ ಹೀಗೆ ತೋರಿಸಲಾಗಿದೆ – "ನೀವು ದೇವರುಗಳೇ ಎಂದು ನಾನು ಹೇಳಿದನೆಂಬುದಾಗಿ ನಿಮ್ಮ ಧರ್ಮಶಾಸ್ತ್ರದಲ್ಲಿ (ಕೀರ್ತನೆ 82:6) ಬರೆದದೆಯಲ್ಲಾ; ಶಾಸ್ತ್ರವು ಸುಳ್ಳಾಗಲಾರದಷ್ಟೆ, ಹಾಗಾದರೆ ದೇವರ ವಾಕ್ಯವನ್ನು ಹೊಂದಿದವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ ತಂದೆಯು ಪ್ರತಿಷ್ಟೆಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನುತ್ತೀರೋ?" – ಯೋಹಾನ 10: 34–36.

"ನೀವು ದೇವರುಗಳು, ಎಲ್ಲರೂ ಪರಾತ್ಪರನ ಮಕ್ಕಳು ಎಂದು ನಾನು ಹೇಳಿದೆನು. ಆದರೂ ನರರಂತೆ ಸತ್ತೇ ಹೋಗುವಿರಿ" (ಕೀರ್ತನೆ 82:6,7). ಆದರೆ, "ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ – ನಾವೆಲ್ಲರೂ ನಿದ್ರೆಹೋಗುವುದಿಲ್ಲ" (1 ಕೊರಿಂಥ 15:51). ಮರಣವು ಒಂದು ಸಂಗತಿಯಾದರೆ, 'ನಿದ್ರೆ ಹೋಗುವುದು' ಪ್ರಜ್ಞಾಹೀನ ಸ್ಥಿತಿ ಇದ್ದಂತೆ ತೀರಾ ಬೇರೆಯಾದುದು. ಹಾಗಾದರೆ, ದೇವರ ಸಾಕ್ಷ್ಯವು ಎಲ್ಲಾ ಭಕ್ತರುಗಳು ಸಾಯಬೇಕೆಂಬುವುದೇ, ಆದರೆ ಅವರೆಲ್ಲರೂ ನಿದ್ರೆ ಹೋಗಬಾರದು. ನಮ್ಮ ಕರ್ತನು ಮರಣ ಹೊಂದಿದನು, ಮೂರನೆಯ ದಿನದವರೆಗೂ ನಿದ್ರೆ ಹೋದನು, ಆಗ ದೇವರು ಅವನನ್ನು ಎಬ್ಬಿಸಿದನು. ಪೌಲ ಮತ್ತು ಇತರೆ ಅಪೋಸ್ತಲರುಗಳು ಮರಣಹೊಂದಿದರು ಮತ್ತು ಆ ರೀತಿಯಲ್ಲಿ "ನಿದ್ರೆ ಮಾಡಿದರು". ಶ್ರಮೆ ಮತ್ತು ಆಯಾಸದಿಂದ 'ಕ್ರಿಸ್ತನಲ್ಲಿ ನಿದ್ರೆ ಮಾಡುವ ವಿಶ್ರಾಂತಿ' ಪಡೆದರು ಮತ್ತು ವಾಗ್ದತ್ತ ಪುನರುತ್ಥಾನಕ್ಕಾಗಿ, ಮತ್ತು ಕರ್ತನ ಎರಡನೆಯ ಆಗಮನದಲ್ಲಿ ಆತನ ರಾಜ್ಯದಲ್ಲಿ ಪಾಲುಗಾರರಾಗುವುದಕ್ಕಾಗಿ ಕಾದುಕೊಂಡಿದ್ದಾರೆ. ಅದೇ ರೀತಿಯಲ್ಲಿ, ರಾಜ್ಯದ ಸ್ಥಾಪನೆಯ ಕಾರ್ಯದ ಕಾಲವು ಯುಕ್ತವಾಗುವಾಗ, ಅವರು ನಿದ್ರೆಯಿಂದ ಎದ್ದೇಳುವ ಕಾಲವೂ ಯುಕ್ತವಾಗುತ್ತದೆ. ಅವರ ನಿದ್ರೆ ಮತ್ತು ಕಾಯುವಿಕೆಯು ಕರ್ತನ ಪ್ರತ್ಯಕ್ಷತೆಯ ನಂತರ, ಆತನ ರಾಜ್ಯದ ಕಾಲವು ಬಂದ ಮೇಲೆಯೂ ಯಾಕೆ ಮುಂದುವರೆಯಬೇಕು? ಇದಕ್ಕೆ ಯಾವ ಕಾರಣವೂ ಇರುವುದಿಲ್ಲ. ಆದುದರಿಂದ, ನಾವು ನಂಬುವುದೇನೆಂದರೆ "ಅವರು ಇನ್ನು ಮೇಲೆ ನಿದ್ರೆ ಮಾಡುವುದಿಲ್ಲ, ಈಗ ಅವರು ಕರ್ತನೊಂದಿಗೆ, ಆತನಂತೆಯೇ ಇದ್ದಾರೆ". ಅವರು ಮರಣದ ನಿದ್ರೆಯಲ್ಲಿ ಮುಂದುವರೆಯುವುದು ಇನ್ನು ಮೇಲೆ ಅವಶ್ಯಕತೆ ಇಲ್ಲವಾದರೆ, ಯಾರಾದರೂ ಭಕ್ತರು ಕರ್ತನ ಪ್ರತ್ಯಕ್ಷತೆಯ ಹಾಗೂ ಆತನ ರಾಜ್ಯದ ಸ್ಥಾಪನೆಯ ಈ ಕಾಲದಲ್ಲಿ ಮರಣಹೊಂದುವವರಾದರೆ ಅವರು "ನಿದ್ರೆಮಾಡಬೇಕು" ಅಥವಾ ಮುಂದೊಂದು ಕಾಲದಲ್ಲಿ ಆಗುವ ಪುನರುತ್ಥಾನಕ್ಕಾಗಿ ಕಾಯಬೇಕಾದ ಅವಶ್ಯಕತೆಯೂ ಇಲ್ಲ, ದೇವರಿಗೆ ಸ್ತೋತ್ರವಾಗಲಿ! ಜೀವದಾಯಕನು ಪ್ರಸ್ತುತಿಗೊಂಡಿದ್ದಾನೆ; ಮತ್ತು 1878ರಿಂದ, ಆತನು ತನ್ನ ಮಹಾ ಅಧಿಕಾರವನ್ನು ಪಡಕೊಂಡು ಅದನ್ನು ಚಲಾಯಿಸಲು ಪ್ರಾರಂಭಿಸಿರುವಾಗ, ಆತನ ಸದಸ್ಯರು ಯಾರೂ ನಿದ್ರಿಸುವ ಅಗತ್ಯವಿಲ್ಲ. ಈ ಕಾರಣದಿಂದ, ಆ ದಿನದಿಂದ ಸಾಯುವ ಎಲ್ಲಾ 'ಪಾದ'ದ ಸದಸ್ಯರಿಗೆ ಮರಣದ ಕ್ಷಣವು ಮಾರ್ಪಡುವ ಸಮಯವಾಗುತ್ತದೆ. ಅವರು ಮನುಷ್ಯರಾಗಿ, ಮನುಷ್ಯರಂತೆ ಮರಣ ಹೊಂದುತ್ತಾರೆ, ಆದರೆ ಅದೇ ಕ್ಷಣದಲ್ಲಿ ಅವರು ಅವರ ಕರ್ತನಂತೆ ಮಹಿಮಾ ಶರೀರಿಗಳಾಗಿ, ಆತ್ಮ ಸ್ವರೂಪಿಗಳಾಗಿ ಮಾಡಲ್ಪಡುತ್ತಾರೆ. ಅವರು ಕರ್ತನೊಂದಿಗೆ ವಾಯುಮಂಡಲದಲ್ಲಿ ರಾಜ್ಯದ ಅಧಿಕಾರ ಮತ್ತು ಮಹಿಮೆಯಲ್ಲಿ ಸದಾ ಇರುವಂತೆ ಈ ಭೂಲೋಕದ ಸ್ಥಿತಿಗಳಿಂದ ದೂರ ಸೆಳೆಯಲ್ಪಡುತ್ತಾರೆ.

ನಮ್ಮ ಕರ್ತನು ತನ್ನ ಮಾನವ ಸ್ವಭಾವದ ತ್ಯಾಗವನ್ನು ನೆರವೇರಿಸಿ, ಸತ್ತವರೊಳಗಿಂದ ಜೀವಿತನಾಗಿ ಎದ್ದುಬಂದು ಆತ್ಮಸ್ವರೂಪಕ್ಕೆ ಬದಲಾದ ನಂತರದ ಆತನು "ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ" (ಮತ್ತಾಯ 28: 18) ಎಂದು ಪ್ರಕಟಿಸಿದನು. ಕ್ರಿಸ್ತನ ಎಲ್ಲಾ ಸದಸ್ಯರೂ ತಮ್ಮ ಶಿರಸ್ಸಿನ ಮಾದರಿಯನ್ನು ಅನುಸರಿಸಿ ತ್ಯಾಗವನ್ನು ಮರಣದಲ್ಲಿ ಪೂರೈಸುವವರೆಗೆ ಕ್ರಿಸ್ತನು ಪೂರ್ಣಗೊಳ್ಳುವುದಿಲ್ಲ ಮತ್ತು ಸಮಸ್ತವನ್ನೂ ಸರಿಪಡಿಸುವ ತನ್ನ ಮುಂದಿನ ಕಾರ್ಯಗಳನ್ನು ಮಾಡಲು ಸಂಪೂರ್ಣವಾದ ಅಧಿಕಾರವಿರುವುದಿಲ್ಲ.

ಈ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, "ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು..... ಹೌದು ಅವರು ಧನ್ಯರೇ; ಅವರ ಕಷ್ಟ ತೀರಿತು, ಅವರಿಗೆ ವಿಶ್ರಾಂತಿಯಾಗುವುದು; ಅವರು ಸುಕೃತ್ಯಗಳು ಅವರೊಡನೆ ಬರುವುವು" (ಪ್ರಕಟನೆ 14 : 13). ಎಂಬ ಹೇಳಿಕೆಯು ಎಷ್ಟೋ ಅರ್ಥಗರ್ಭಿತವಾಗಿದೆ. ಈ ಸಂದರ್ಭದ ಹೊರತಾಗಿ ಪರಿಶುದ್ಧ ಗ್ರಂಥದಲ್ಲಿ ಬೇರೆ

* ಫಿಷರನ ವಿಶ್ವ ಇತಿಹಾಸ, 402–412 ಪುಟಗಳು.

ಎಲ್ಲಿಯೂ ಮರಣವು ಯಾವ ಅರ್ಥದಲ್ಲಿಯೂ ಆಶೀರ್ವಾದಕರವೆಂದು ಪ್ರತಿನಿಧಿಸಲ್ಪಟ್ಟಿಲ್ಲ. ಇಲ್ಲಿ ಅದು ವೈಶಿಷ್ಟ್ಯಪೂರ್ಣವಾಗಿ ಮಿತಿಯುಳ್ಳದ್ದು ಮತ್ತು ಅದು ಇಲ್ಲಿ **'ಇಂದಿನಿಂದ'** (from henceforth) ಎಂಬ ಒಂದು ಖಚಿತವಾದ ನಿರ್ದಿಷ್ಟ ಸಮಯಕ್ಕೆ ಅನ್ವಯಿಸಲ್ಪಟ್ಟಿದೆ.* ಆವಾಗಲೂ ಅದು **"ಸತ್ತವರು, ಸಾಯುವವರು"** - "the dead who die" ಎಂಬ ಒಂದು ವಿಶೇಷವಾದ ವರ್ಗದವರನ್ನು ಮಾತ್ರವೇ ಆಶೀರ್ವದಿಸುವುದಾಗಿದೆ. ಈ ಹೇಳಿಕೆಯನ್ನು ದೊಡ್ಡ ತಪ್ಪು ಎಂದು ಎಣಿಸಬಾರದು. ಆದರೆ ಒಂದು ಸಣ್ಣ ವರ್ಗದವರಿಗೆ ಮಾತ್ರ ನಾಟುವಂತೆ ಪ್ರಭಾವಯುತವಾದ ಹೇಳಿಕೆ ಎಂದು ಪರಿಗಣಿಸತಕ್ಕದ್ದು. ಈ ವರ್ಗವು "ಆತನ ಪಾದವಾಗಿದೆ". ಈಗಾಗಲೇ ತೋರಿಸಿರುವಂತೆ, ಕ್ರಿಸ್ತನ ದೇಹದ ಪ್ರತಿಯೊಂದು ಸದಸ್ಯನೂ ತನ್ನ ತ್ಯಾಗವನ್ನು ನಿಜವಾದ ಮರಣದಿಂದ ಪೂರೈಸಬೇಕು.

ಇವರು ಮಾತ್ರವೇ "ಸತ್ತವರು" ಸಾಯುವವರು. ದೇವರ ಎಣಿಕೆಯಲ್ಲಿ ಈಗಾಗಲೇ ಸತ್ತಿದ್ದಾರೆಂದು ಪರಿಗಣಿಸಲಾಗಿದೆ. ಹಾಗೂ ಅವರು ತಮ್ಮನ್ನು ತಾವು ಹಾಗೆ ಎಣಿಸಿಕೊಳ್ಳುವಂತೆ ಪ್ರೇರಿಸಲಾಗಿದೆ; "ನಿಜವಾಗಿಯೂ ಪಾಪದ ಪಾಲಿಗೆ ಸತ್ತವರೆಂದು ಎಣಿಸಿಕೊಳ್ಳಿರಿ". ಬೇರೆ ಯಾವ ಸತ್ತ ಮನುಷ್ಯರನ್ನೂ ಮತ್ತೆ ಸಾಯುವಂತೆ ಹೇಳಿಲ್ಲ. ಈ ವರ್ಗದ ಸತ್ತವರನ್ನು ಹೊರತುಪಡಿಸಿ ಅವರು ಮರಣಿಸಿ ತಮ್ಮ ಬಲಿದಾನದ ಅವಧಿಯನ್ನು ಮುಗಿಸಬೇಕು.

ಈ ರೀತಿಯಲ್ಲಿ ದೇವರು ಚಿಯೋನಿಗೆ ಆಕೆಯ ಉದಯದ ಜಾವದಲ್ಲಿ ಕ್ರಿಸ್ತನ ವಿಜಯೋತ್ಸವದ ನಿತ್ಯಜೀವದ ಬೆಳಗಿನ ಜಾವದಲ್ಲಿ ಸಹಾಯಮಾಡುವನು. ಈ ರೀತಿಯಲ್ಲಿ ಆತನು ಈಗಾಗಲೇ ಆಕೆಗೆ ಸಹಾಯಮಾಡುತ್ತಿದ್ದಾನೆ. ಪ್ರಪಂಚಕ್ಕೆ ಅಗೋಚರವಾಗಿ, ಒಬ್ಬರ ನಂತರ ಒಬ್ಬರು, ಭಕ್ತರುಗಳು ಈಗ ಬದಲಾವಣೆ ಹೊಂದುತ್ತಿದ್ದಾರೆ ಮತ್ತು ವಿಜಯಹೊಂದಿರುವ ಕ್ರೈಸ್ತ ಸಭೆಯ ತಂಡವನ್ನು ಸೇರಿಕೊಳ್ಳುತ್ತಿದ್ದಾರೆ. ಕಡೆಯವರೆಗೆ ಉಳಿಯುವವರು ನಿರಂತರ ಇರುವ ಸುವಾರ್ತೆಯನ್ನು ಬಾಗಿಲು ಮುಚ್ಚುವವರೆಗೆ ಮತ್ತು ದುಡಿಮೆಯ ಎಲ್ಲಾ ಅವಕಾಶಗಳು ಮುಗಿಯುವವವರೆಗೂ ಪ್ರಸಿದ್ಧಿಪಡಿಸುತ್ತಿದ್ದಾರೆ. ನಂತರದಲ್ಲಿ ಅವರು ನಂಬಿಕೆ ಮತ್ತು ತಾಳ್ಮೆಯಲ್ಲಿ 'ನಿಲ್ಲುವರು' ಮತ್ತು ತಮ್ಮ ಬದಲಾವಣೆಗಾಗಿ, ದೇವರು ಸಂತೋಷದಿಂದ ಅನುಮತಿಸುವ ಯಾವುದಾದರೂ ಪಾರುಪತ್ಯದ ಮೂಲಕ ನೆರವೇರುವಂತೆ ದಯಪಾಲಿಸುವ ತಮ್ಮ ಬಿಡುಗಡೆಗೆ ಸಂತೋಷಪೂರ್ವಕವಾಗಿ ಅಂಗೀಕರಿಸುತ್ತಾ ಕಾಯುತ್ತಾರೆ.

ಈ ರೀತಿಯಲ್ಲಿ ಅವರು ಅವರ ನಿರ್ಗಮನವನ್ನು ಅನುಸರಿಸುವ ಸಂಕಷ್ಟದ ಮಹಾ ಚಂಡಮಾರುತದಿಂದ ಅವರನ್ನು ಕಾಪಾಡುವನು. ಮಾತ್ರವಲ್ಲದೆ ಅವರನ್ನು ಸಹಸ್ರಾರು ಮಂದಿ ಧರ್ಮನಿಂದನೆಗೆ ಬಿದ್ದು ವಿಧವಿಧವಾದ ತಪ್ಪಿನ ಪಿಡುಗುಗಳಿಗೆ ತುತ್ತಾಗುವುದರಿಂದ ಜಯಗೊಳಿಸಿ ದೃಢವಾಗಿ ನಿಲ್ಲುವವರಂತೆ ಜೋಪಾನ ಮಾಡುವನು – ಕೀರ್ತನೆ 91:7.

ಸಂಕಟದ ಸಮಯವು ಹತ್ತಿರವಾದಂತೆಲ್ಲಾ ನಾವು ನಿಜವಾದ ಸಭೆಯು ಅದರ ಪ್ರಸ್ತುತ ಸ್ಥಿತಿಯಲ್ಲಿ, ಎಲೀಯ ಮತ್ತು ಯೋಹಾನನ ವರ್ಗದವರು ತಮ್ಮ ಪ್ರಭಾವ ಮತ್ತು ಸಂಖ್ಯೆಯಲ್ಲಿ ಕಡಿಮೆಯಾಗುವುದನ್ನು, ಅದೇ ಸಮಯದಲ್ಲಿ ಕ್ರಿಸ್ತನ ವಿಜಯ ಮತ್ತು ಮಹಿಮೆಯೊಂದಿಗೆ ಅದೇ ದೇಹವು ಪರದೆಯ ಆಚೆ ಬದಿಯಲ್ಲಿ ವಿಜಯೋತ್ಸವ ಮಾಡುವುದನ್ನು ನಿರೀಕ್ಷಿಸಬಹುದು. ಇದನ್ನು ಯೋಹಾನನು ಪ್ರವಾದನೀಯವಾಗಿ ಹೀಗೆ ಸೂಚಿಸಿದ್ದಾನೆ – "ಆತನು ವೃದ್ಧಿಯಾಗಬೇಕು, ನಾನು ಕಡಿಮೆಯಾಗಬೇಕು" ಅಂದನು – ಯೋಹಾನ 3:30.

* * * * * * *

---

* ಮುಂದಿನ ಸಂಪುಟದಲ್ಲಿ ನಾವು ಪ್ರಕಟನೆಗಾರನ ಅದ್ಭುತ ದರ್ಶನಗಳನ್ನು ಪರೀಕ್ಷಿಸುವಾಗ, 'ಇಂದಿನಿಂದ' (henceforth) ಎಂದು ಇಲ್ಲಿ ಸೂಚಿಸಿರುವ ಸಮಯವು ಘಟನೆಗಳಿಂದ ಗುರುತಿಸಲ್ಪಡುತ್ತದೆ ಎಂಬುದನ್ನು ನಾವು ಸ್ಪಷ್ಟವಾಗಿ ನೋಡುವವರಾಗಿದ್ದೇವೆ. ಇಲ್ಲಿ ನೀಡಿರುವ ಪ್ರವಾದನೆಯಲ್ಲಿ ಗಮನಿಸುವಂತೆ ಇದು 1878ರೊಂದಿಗೆ ಸಮಕಾಲಿಕವಾಗುತ್ತದೆ .

**A LITTLE WHILE**

" A little while, our fightings will be over ;
A little while, out tears be wiped away
A little while, the power of Jehovah
Will turn our darkness into heaven's bright day

"A little while ! 'the fears that oft surround us
Will to the memories of the past belong;
A little while, the love that sought and found us
Will change our weeping into heaven's glad song

A little while ! 'Tis ever drawing nearer
The brighter drawing of that glorious day
Blest Savior, make our spirit's vision clearer
And guide, Oh! Guide us in the shining way.

"A little while, O blessed expectation !
For strength to run patience, Lord, we cry
Our hearts leap in fond anticipation:
Our union with the bridegroom draweth nigh"

**ಸ್ವಲ್ಪ ಕಾಲದವರೆಗೆ**

ಸ್ವಲ್ಪ ಕಾಲ, ನಮ್ಮ ಹೋರಾಟವು ಮುಗಿಯುವುದು;
ಸ್ವಲ್ಪ ಕಾಲ, ನಮ್ಮ ಕಣ್ಣೀರನ್ನೆಲ್ಲ ತೊಡೆದು ಹೋಗ್ವದು;
ಸ್ವಲ್ಪ ಕಾಲ, ಯೆಹೋವನ ಬಲವು ನಮ್ಮಲ್ಲಿರುವ ಕತ್ತಲನ್ನು
ಪರಲೋಕದ ಪ್ರಕಾಶ ದಿನವನ್ನಾಗಿಸುವದು

ಸ್ವಲ್ಪ ಕಾಲ, ನಮ್ಮನ್ನು ಮುತ್ತಿದ ಭೀತಿಯು;
ಗತಕಾಲದ ನೆನಪುಗಳಾಗಿ ಸೇರಿಸಿಕೊಳ್ಳುವದು;
ಸ್ವಲ್ಪ ಕಾಲ, ನಮ್ಮನ್ನು ಹುಡುಕಿ ಕಂಡುಕೊಂಡ ಪ್ರೀತಿಯೂ
ನಮ್ಮ ಕಣ್ಣೀರನ್ನು ಪರಲೋಕದ ಹರ್ಷ ಸಂಗೀತವನ್ನಾಗಿ
ಮಾರ್ಪಡಿಸುವುದು

ಸ್ವಲ್ಪ ಕಾಲ, ಬಹಳ ಸಮೀಪದಲ್ಲಿದೆ;
ಮಹಿಮೆಯುಳ್ಳ ದಿನದ ಪ್ರಕಾಶಮಾನವಾದ ಹಗಲು
ಮೂಡಲಿದೆ,
ದಿವ್ಯನಾದ ವಿಮೋಚಕನು, ನಮ್ಮ ಆತ್ಮೀಕ ದೃಷ್ಠಿಯನ್ನು
ಸ್ಪಷ್ಟಗೊಳಸುವನು,
ಮಾರ್ಗದರ್ಶಿಸುತ್ತಾ. ಆಹಾ! ಪ್ರಕಾಶಮಯ ದಾರಿಗೆ
ಮಾರ್ಗದರ್ಶಿಸುವನು.

ಇನ್ನು ಸ್ವಲ್ಪ ಕಾಲ, ದಿವ್ಯವಾದ ಓ ನಿರೀಕ್ಷೆಯೇ!
ತಾಳ್ಮೆಯಿಂದ ಒಡಲು ಬಲವನ್ನು ಬೇಡುತ್ತಾ
ಕರ್ತನೇ ನಾವು ಕೂಗುವೆವು,
ನಮ್ಮ ಹೃದಯಗಳು ಅಕ್ಕರೆಯ ಪೂರ್ವ ನಿರೀಕ್ಷೆಯಿಂದ
ಮಿಡಿಯುವುದು,
ಮದಲಿಂಗನೊಡನೆ ಸೇರಲು ಸಮಯವು ಸಮೀಪಿಸಿದೆ.